Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 09-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 09-12-2020 |
|---|---|
| Page No | 2 |


## ಡಾ.ಕೆ. ಶಿವರಾಮ ಕಾರಂತ ಬಡಾವಣೆ

# ಅಧಿಕಾರಿಗಳ ಜತೆ ಸಮಿತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ.ಕೆ.ಶಿವರಾಮ ಕಾರಂತ ಬಡಾವಣೆಗಾಗಿ ಗುರುತಿಸಲಾದ ಜಾಗದಲ್ಲಿ ಕಾನೂನುಬದ್ಧವಾಗಿ ನಿರ್ಮಾಣವಾಗಿರುವ ಕಟ್ಟಡಗಳು ಮತ್ತು ವಾಸದ ಮನೆಗಳನ್ನು ಗುರುತಿಸುವ ಸಲುವಾಗಿ ಸುಪ್ರೀಂ ಕೋರ್ಟ್ ನೇಮಿಸಿರುವ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ನೇತೃತ್ವದಲ್ಲಿ ಸಮಿತಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿತು.

ಈ ಬಡಾವಣೆ ಅಭಿವೃದ್ಧಿಗಾಗಿ ಬಿಡಿಎ ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ ಕಟ್ಟಡ ನಿರ್ಮಿಸಲು ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ ಚಂದ್ರಶೇಖರ್ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಸಮಿತಿಯ ಕಾರ್ಯ ನಿರ್ವಹಣೆಗೆ ಕಚೇರಿಯನ್ನು ಒದಗಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. 'ಬಿಡಿಎ ಕೇಂದ್ರ ಕಚೇರಿ ಆವರಣದಲ್ಲೇ ಕಚೇರಿಯನ್ನು ಹಾಗೂ ಸಿಬ್ಬಂದಿಯನ್ನು ಒದಗಿಸುವುದಾಗಿ' ಬಿಡಿಎ ಆಯುಕ್ತ ಎಚ್.ಆರ್. ಮಹದೇವ್ ತಿಳಿಸಿದರು.

ಈ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಳ್ಳಬೇಕಿದ್ದ ಒಟ್ಟು 3,546 ಎಕರೆ ಭೂಮಿಯಲ್ಲಿ 257 ಎಕರೆಯನ್ನು 2009–10ರ ಅವಧಿಯಲ್ಲಿ ರಾಜ್ಯ ಸರ್ಕಾರ ಕೈಬಿಡುವ ಮೂಲಕ ಭೂಮಾಲೀಕರಿಗೆ ಅನುಕೂಲ ಕಲ್ಪಿಸಿತ್ತು. ಈ ಕುರಿತು ಸಲ್ಲಿಕೆಯಾದ ಅರ್ಜಿ ವಿಲೇವಾರಿ ಮಾಡಿದ್ದ ಹೈಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದುಪಡಿಸಿತ್ತು. ಬಳಿಕ ಅನೇಕರು ಬಿಡಿಎ ನಿರಾಕ್ಷೇಪಣಾ ಪತ್ರ ಪಡೆದು ಈ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದರು.

ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದು ಮಾಡಿರುವ ಕುರಿತ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಹಾಗೂ ಬಿಡಿಎಗೆ 2018ರ ಆಗಸ್ಟ್ 3ರಂದು ನಿರ್ದೇಶನ ನೀಡಿತ್ತು.

2020ರ ಡಿ 3ರಂದು ತನ್ನ ಹಿಂದಿನ ಆದೇಶದಲ್ಲಿ ಮಾರ್ಪಾಡು ಮಾಡಿದ್ದ ಸುಪ್ರೀಂ ಕೋರ್ಟ್ 'ನಿಯಮಾನುಸಾರ ಅನುಮತಿ ಪಡೆದು ನಿರ್ಮಾಣವಾಗಿರುವ ಕಟ್ಟಡಗಳಿಗೆ ರಕ್ಷಣೆ ಒದಗಿಸಬೇಕು. ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳ ಕಾನೂನುಬದ್ಧ ಕಟ್ಟಡಗಳನ್ನು ಕೆಡವಬಾರದು' ಎಂದು ಅಭಿಪ್ರಾಯಪಟ್ಟಿತ್ತು. ಈ ಸಲುವಾಗಿ ನಿವೃತ್ತ ನ್ಯಾ.ಚಂದ್ರಶೇಖರ್ ನೇತೃತ್ವದಲ್ಲಿ ಸಮಿತಿಯನ್ನೂ ರಚಿಸಿತ್ತು.

ಬಿಡಿಎಯಲ್ಲಿ ಈ ಹಿಂದೆ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದ ಐಎಎಸ್ ಅಧಿಕಾರಿ (ನಿವೃತ್ತ) ಜೈಕರ್ ಜೆರೋಮ್ ಹಾಗೂ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಎಸ್.ಟಿ.ರಮೇಶ್ ಸಮಿತಿಯಲ್ಲಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 09-12-2020 |
| --- | --- |
| Page No | 3 |


### ಮೇಯರ್ ಹುದ್ದೆ ಸಿಗದವರಿಗೆ ವಲಯ ಸಮಿತಿ ಅಧ್ಯಕ್ಷರಾಗಲು ಅವಕಾಶ – ಬಿಬಿಎಂಪಿ ಮಸೂದೆಯಲ್ಲಿ ಹೊಸ ಅಂಶ

# ಅಧಿಕಾರ ವಿಕೇಂದ್ರೀಕರಣ– ವಲಯಕ್ಕೊಂದು ಸಮಿತಿ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಈ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡನೆ ಆಗಲಿರುವ 'ಬಿಬಿಎಂಪಿ ಮಸೂದೆ 2020' ಅಧಿಕಾರ ವಿಕೇಂದ್ರೀಕರಣದ ಅನೇಕ ಅಂಶಗಳಿವೆ. ಮೇಯರ್ ಅಧ್ಯಕ್ಷತೆಯಲ್ಲಿ ಬಿಬಿಎಂಪಿ ಕೌನ್ಸಿಲ್ ರಚಿಸುವುದರ ಜೊತೆಗೆ ವಲಯ ಮಟ್ಟದಲ್ಲಿ ಪ್ರತ್ಯೇಕ ಸಮಿತಿ ರಚಿಸುವ ಬಗ್ಗೆ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಆಯಾ ವಲಯಗಳ ವ್ಯಾಪ್ತಿಯಲ್ಲಿ ಬಿಬಿಎಂಪಿ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಅನುಷ್ಠಾನದ ಅಧಿಕಾರವನ್ನು ಈ ಸಮಿತಿಗೆ ವಹಿಸಲಾಗುತ್ತದೆ.

ಎಸ್.ರಘು ನೇತೃತ್ವದ ವಿಧಾನ ಮಂಡಲದ ಜಂಟಿ ಸಲಹಾ ಸಮಿತಿ ಅನುಮೋದಿಸಿರುವ ಈ ಹೊಸ ಮಸೂದೆಯಲ್ಲಿ ಮೇಯರ್ ಅಧಿಕಾರಾವಧಿ 30 ತಿಂಗಳುಗಳಿಗೆ ಹೆಚ್ಚಿಸಲಾಗುತ್ತಿದೆ. ಹಾಗಾಗಿ ಒಂದು ಅವಧಿಗೆ ಇಬ್ಬರಿಗೆ ಮಾತ್ರ ನಗರದ ಪ್ರಥಮ ಪ್ರಜೆಯಾಗುವ ಅವಕಾಶ ದಕ್ಕಲಿದೆ. ಮೇಯರ್ ಸ್ಥಾನದ ಆಕಾಂಕ್ಷಿಗಳು ಅಸಮಾಧಾನ ತಣಿಸಲು ವಲಯ ಸಮಿತಿ ಅಧ್ಯಕ್ಷರಾಗಲು ಅವಕಾಶ ಕಲ್ಪಿಸುವಂತಹ ಜಾಣ ಉಪಾಯವನ್ನು ಸಲಹಾ ಸಮಿತಿಯು ಮಸೂದೆಯಲ್ಲಿ ಪ್ರಸ್ತಾಪಿಸಿದೆ.

ವಲಯ ಸಮಿತಿಗಳಿಗೆ ಅದರ ವ್ಯಾಪ್ತಿಯ ವಾರ್ಡ್ ಒಂದರ ಪಾಲಿಕೆ ಸದಸ್ಯರು ಅಧ್ಯಕ್ಷರಾಗಲಿದ್ದಾರೆ. ಆಯಾ ವಲಯದ ವಾರ್ಡ್‌ಗಳ ಪಾಲಿಕೆ ಸದಸ್ಯರು ಅವರನ್ನು ಚುನಾಯಿಸಲಿದ್ದಾರೆ. ಈ ಸಮಿತಿ ಅಧ್ಯಕ್ಷರು ಯಾರಾಗುತ್ತಾರೆ ಎಂಬುದು ಆಯಾ ವಲಯದಲ್ಲಿ ಯಾವ ಪಕ್ಷವು ಬಹುಮತ ಗಳಿಸಲಿದೆ ಎಂಬುದನ್ನು ಆಧರಿಸಿದೆ. ಪಾಲಿಕೆಯಲ್ಲಿ ಅಧಿಕಾರದಲ್ಲಿರದಿದ್ದರೂ ಪಕ್ಷವೊಂದು ನಿರ್ದಿಷ್ಟ ವಲಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪಾಲಿಕೆ ಸದಸ್ಯರನ್ನು ಹೊಂದಿದ್ದರೆ, ಆ ಪಕ್ಷಕ್ಕೆ ವಲಯ ಸಮಿತಿ ಅಧ್ಯಕ್ಷ ಸ್ಥಾನ ಒಲಿಯಲಿದೆ.

ಮೇಯರ್ ಅಧಿಕಾರಾವಧಿಯನ್ನು 30 ತಿಂಗಳಿಗೆ ಹೆಚ್ಚಿಸಿದ್ದರೂ, ವಲಯ ಸಮಿತಿ ಅಧ್ಯಕ್ಷರಾಗುವವರಿಗೆ ಈ ಅವಕಾಶ ಇಲ್ಲ. ಅವರ ಅಧಿಕಾರಾವಧಿ ಒಂದು ವರ್ಷಕ್ಕೆ ಸೀಮಿತ. ಒಮ್ಮೆ ಈ ಸಮಿತಿ ಅಧ್ಯಕ್ಷರಾಗಿ ಚುನಾಯಿತನಾಗುವ ವ್ಯಕ್ತಿ ಇನ್ನೊಂದು ಅವಧಿಗೆ ಅಧ್ಯಕ್ಷರಾಗುವಂತಿಲ್ಲ. ಹಾಗಾಗಿ ಸಹಜವಾಗಿಯೇ ಐದು ವರ್ಷದ ಅಧಿಕಾರಾವಧಿಯಲ್ಲಿ ವಲಯವೊಂದರಲ್ಲಿ ಐವರಿಗೆ ಸಮಿತಿ ಅಧ್ಯಕ್ಷರಾಗುವ ಅವಕಾಶ ಒಲಿಯಲಿದೆ.

ವಲಯ ಆಯುಕ್ತರು ಈ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅವರು ತಿಂಗಳಿಗೆ ಒಂದು ಬಾರಿಯಾದರೂ ಸಮಿತಿ ಸಭೆಯನ್ನು ನಡೆಸಲು ಕ್ರಮಕೈಗೊಳ್ಳಬೇಕು. ಈ ಸಭೆ ನಡೆಸಲು ಒಟ್ಟು ಸದಸ್ಯ ಬಲದ ನಾಲ್ಕನೇ ಒಂದಂಶ ಸದಸ್ಯರು ಹಾಜರಿರಬೇಕು. ಸಭೆಯ ನಡಾವಳಿಗಳನ್ನು ದಾಖಲಿಸಿ ಮುಖ್ಯ ಆಯುಕ್ತರಿಗೆ ಕಳುಹಿಸಿಕೊಡುವ ಹೊಣೆ ವಲಯ ಆಯುಕ್ತರದು.

ವಲಯ ಸಮಿತಿಗಳ ಕಾರ್ಯನಿರ್ವಹಣೆಗಾಗಿಯೇ ಪಾಲಿಕೆ ಕಚೇರಿಯನ್ನು ಹಾಗೂ ಸಿಬ್ಬಂದಿಯನ್ನು ಒದಗಿಸಲಿದೆ.

ಕಸ ನಿರ್ವಹಣೆಯಲ್ಲಿ ಪರಿಣಿತರೊಬ್ಬರನ್ನು ಹಾಗೂ ನಗರ ಆಡಳಿತದ ತಜ್ಞರೊಬ್ಬರನ್ನು ಸಮಿತಿ ಸದಸ್ಯರನ್ನಾಗಿ ಸರ್ಕಾರ ನಾಮನಿರ್ದೇಶನ ಮಾಡಲಿದೆ. ಸಮಿತಿ ಸದಸ್ಯರಾಗುವವರಿಗೆ ಏನು ಅರ್ಹತೆಗಳಿರಬೇಕು, ಅವರ ಆಯ್ಕೆ ವಿಧಾನ ಹೇಗೆ, ಅವರಿಗೆ ಎಷ್ಟು ಗೌರವಧನ ನಿಗದಿಪಡಿಸಬೇಕು ಎಂಬ ಬಗ್ಗೆ ಸರ್ಕಾರ ಸೂಕ್ತ ನಿಯಮ ರೂಪಿಸಲಿದೆ.

ಆ ವಲಯದ ಉಸ್ತುವಾರಿಯಾಗಿರುವ ಎಂಜಿನಿಯರ್, ಆಯಾ ವಲಯದ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಜಲಮಂಡಳಿಯ ಕೆಲಸ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿಗಳು, ವಾರ್ಡ್‌ಗಳ ಸಂಚಾರ ವ್ಯವಸ್ಥೆ ನಿರ್ವಹಣೆಯ ಹೊಣೆಹೊತ್ತ ಪೊಲೀಸ್ ಅಧಿಕಾರಿ ಹಾಗೂ ಬೆಸ್ಕಾಂ ಅಧಿಕಾರಿಗಳೂ ಸಮಿತಿಯ ಅಧಿಕಾರೇತರ ಸದಸ್ಯರಾಗಿರುತ್ತಾರೆ. ಅವರಿಗೆ ಮತದಾನದ ಹಕ್ಕು ಇರುವುದಿಲ್ಲ.

ವಲಯಸಮಿತಿ ಅಂಗೀಕರಿಸುವ ಯೋಜನೆಗಳು ಕಾನೂನು ಬದ್ಧವಾಗಿರಬೇಕು. ನಿರ್ಣಯ ತಳೆಯುವಾಗ ಸಾಧ್ಯವಾದಷ್ಟು ಒಮ್ಮತದ ಅಭಿಪ್ರಾಯಕ್ಕೆ ಬರಬೇಕು. ಒಮ್ಮತದ ಅಭಿಪ್ರಾಯ ಸಾಧ್ಯವಿಲ್ಲದೇ ಇದ್ದಾಗ ನಿರ್ಣಯಗಳನ್ನು ಸದಸ್ಯರ ಮತಕ್ಕೆ ಹಾಕಿ ಬಹುಮತದ ಆಧಾರದಲ್ಲಿ ಕ್ರಮಕೈಗೊಳ್ಳಬೇಕು ಎಂಬ ಅಂಶವೂ ಮಸೂದೆಯಲ್ಲಿದೆ.

**ಅನುದಾನ ಹಂಚಿಕೆ:** ಬಿಬಿಎಂಪಿ ಬಜೆಟ್‌ನಲ್ಲಿ ನಿರ್ದಿಷ್ಟ ವಲಯಕ್ಕೆ ನಿಗದಿಪಡಿಸಲಾದ ಅನುದಾನವನ್ನು ವಲಯ ಸಮಿತಿಯು ವಾರ್ಡ್ ಸಮಿತಿಗಳಿಗೆ ಹಂಚಿಕೆ ಮಾಡಲಿದೆ. ಈ ಅನುದಾನಗಳ ಹಂಚಿಕೆ ಸರ್ಕಾರದ ಮಾನದಂಡಗಳಿಗೆ ಅನುಗುಣವಾಗಿಯೇ ನಡೆಯಬೇಕು. ವಾರ್ಡ್ ಸಮಿತಿಯು ನಿಗದಿತ ಅವಧಿಯಲ್ಲಿ ಅದನ್ನು ಉಪಯೋಗಿಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ವಲಯ ಸಮಿತಿಗೆ ಸಲ್ಲಿಸಬೇಕು.

## ವಲಯ ಸಮಿತಿಯ ಕಾರ್ಯಗಳೇನು?

- ಬಿಬಿಎಂಪಿಯ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಆ ವಲಯದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಉಸ್ತುವಾರಿ ನೋಡಿಕೊಳ್ಳುವುದು
- ಎಂಜಿನಿಯರ್‌ಗಳಿಗೆ ಅಥವಾ ಇತರ ಅಧಿಕಾರಿಗಳಿಗೆ ಯಾವುದೇ ಯೋಜನೆ ಅಥವಾ ಕಾರ್ಯಕ್ರಮ ಅನುಷ್ಠಾನಕ್ಕಾಗಿ ನಿರ್ದೇಶನ ನೀಡುವುದು
- ಕಸ ನಿರ್ವಹಣೆ, ಸಾರ್ವಜನಿಕ ಬೀದಿಗಳ ಅಭಿವೃದ್ಧಿ, ಉದ್ಯಾನಗಳೂ ಸೇರಿದಂತೆ ಸಾರ್ವಜನಿಕ ಸ್ಥಳಗಳ ಅಭಿವೃದ್ಧಿ, ವಲಯದ ಸಾರ್ವಜನಿಕ ಸ್ಥಳಗಳು ಆಹ್ಲಾದಕರ ನೋಟವನ್ನು ಹೊಂದಿರುವಂತೆ ನೋಡಿಕೊಳ್ಳುವುದು ಹಾಗೂ ಮುಂತಾದ ಮೂಲಸೌಕರ್ಯ ಯೋಜನೆಗಳಿಗೆ ಮಂಜೂರಾತಿ ನೀಡುವುದು
- ವಾರ್ಡ್ ಸಮಿತಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕೈಗೊಂಡ ನಿರ್ಣಗಳನ್ನು ಪರಿಶೀಲಿಸಿ ಅವುಗಳ ಅನುಷ್ಠಾನಕ್ಕೆ ಪಾಲಿಕೆಗೆ ಶಿಫಾರಸು ಮಾಡುವುದು.
- ನಾಗರಿಕ ಪ್ರಜ್ಞೆಯನ್ನು ಮೂಡಿಸಲು ಸಾರ್ವಜನಿಕ ಸಹಭಾಗಿತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು
- ಪಾಲಿಕೆಯು ಕಾಲ ಕಾಲಕ್ಕೆ ಗೊತ್ತುಪಡಿಸುವ ಕಾರ್ಯಗಳ ಮೇಲುಸ್ತುವಾರಿ ನೋಡಿಕೊಳ್ಳುವುದು

## ನಿರ್ಣಯ ರದ್ದುಪಡಿಸುವ ಅಧಿಕಾರ ಮುಖ್ಯ ಆಯುಕ್ತರಿಗೆ

ವಲಯ ಸಮಿತಿ ಕೈಗೊಳ್ಳುವ ನಿರ್ಣಯಗಳನ್ನು ಪರಾಮರ್ಶಿಸುವ ಹಾಗೂ ಅದನ್ನು ರದ್ದುಪಡಿಸುವ ಅಧಿಕಾರವನ್ನು ಮುಖ್ಯ ಆಯುಕ್ತರಿಗೆ (ಮಸೂದೆಯಲ್ಲಿ ಈಗಿನ ಬಿಬಿಎಂಪಿ ಆಯಕ್ತರ ಹುದ್ದೆಯನ್ನು ಮುಖ್ಯ ಆಯುಕ್ತರು ಹುದ್ದೆಯನ್ನಾಗಿ ಪರಿವರ್ತಿಸುವ ಪ್ರಸ್ತಾಪವಿದೆ) ನೀಡಲಾಗಿದೆ. ಸಮಿತಿಯ ನಿರ್ಣಯ ಬಿಬಿಎಂಪಿ ಕಾಯ್ದೆಗೆ ಅಥವಾ ಪ್ರಸ್ತುತ ಅಸ್ತಿತ್ವದಲ್ಲಿರುವ ಇತರ ಕಾಯ್ದೆಗಳಿಗೆ ವಿರುದ್ಧವಾಗಿದೆ ಎಂದು ಮನಗಂಡರೆ ಮುಖ್ಯ ಆಯುಕ್ತರು ಅದನ್ನು ರದ್ದುಪಡಿಸಬಹುದು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 09-12-2020 |
| --- | --- |
| Page No | 3 |


# 'ನನ್ನ ನಗರ-ನನ್ನ ಬಜೆಟ್' ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಹಾಗೂ ಜನಾಗ್ರಹ ಸಂಸ್ಥೆಯ ಜಂಟಿ ಸಹಭಾಗಿತ್ವದಲ್ಲಿ ಹಮ್ಮಿಕೊಂಡ 'ನನ್ನ ನಗರ-ನನ್ನ ಬಜೆಟ್' ಅಭಿಯಾನಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

'ನಗರಕ್ಕೆ ಏನು ಅಗತ್ಯವಿದೆ ಎಂದು ಸಾರ್ವಜನಿಕರು ಹೇಳಬೇಕಿದೆ. ಸಾರ್ವಜನಿಕ ಶೌಚಾಲಯಗಳು ಹಾಗೂ ಪಾದಚಾರಿ ಸ್ನೇಹಿ ಮಾರ್ಗಗಳ ಮೇಲೆ ಪಾಲಿಕೆಯ ಈ ಬಜೆಟ್‌ನಲ್ಲಿ ವಿಶೇಷ ಗಮನ ಹರಿಸಲಾಗುವುದು. ಶೌಚಾಲಯಗಳ ಉತ್ತಮ ನಿರ್ವಹಣೆಯೊಂದಿಗೆ ಸಾರ್ವಜನಿಕವಾಗಿ ಮೂತ್ರ ವಿಸರ್ಜನೆಯನ್ನು ಕೊನೆಗಾಣಿಸುವ ಉದ್ದೇಶವಿದೆ' ಎಂದು ಪಾಲಿಕೆ ಆಯುಕ್ತ ಮಂಜುನಾಥ್ ಪ್ರಸಾದ್ ತಿಳಿಸಿದರು.

ಜನಾಗ್ರಹ ಸಂಸ್ಥೆಯ ಶ್ರೀನಿವಾಸ ಅಲವಿಲ್ಲಿ, 'ಸಾರ್ವಜನಿಕವಾಗಿ ಮೂತ್ರ ವಿಸರ್ಜಿಸುವ 'ಹಳದಿ ತಾಣ'ಗಳು ನಗರದಲ್ಲಿ ಬಹಳಷ್ಟಿವೆ. ಜನರ ಸಹಭಾಗಿತ್ವ ಇಲ್ಲದೆ, ಈ ಸಮಸ್ಯೆಗೆ ಪರಿಹಾರ ಕಷ್ಟಕರ. ನಾಗರಿಕ ಸಂಘ ಸಂಸ್ಥೆಗಳೂ ಈ ಅಭಿಯಾನಕ್ಕೆ ಕೈಜೋಡಿಸಬಹುದು' ಎಂದರು.

'ಹದಗೆಟ್ಟಿರುವ ಪಾದಚಾರಿ ಮಾರ್ಗ ಹಾಗೂ ಹಳದಿ ತಾಣಗಳನ್ನು ನಾಗರಿಕರೇ ಗುರುತಿಸಿ, ಸಮಸ್ಯೆಯ ಪರಿಹಾರಕ್ಕೆ ಕೈಜೋಡಿಸಬಹುದು. ಇದರಿಂದ ಬಜೆಟ್ ಗಾತ್ರವನ್ನು ನಿರ್ಧರಿಸಲು ಅನುಕೂಲವಾಗಲಿದೆ. ಅಭಿಯಾನದಲ್ಲಿ ಭಾಗವಹಿಸಲು ನಾಗರಿಕರು https://www.ichangemycity.com/mcmb2020 ಅನ್ನು ಬಳಸಬಹುದು' ಎಂದು ಜನಾಗ್ರಹ ಸಂಸ್ಥೆಯ ಸಪ್ನಾ ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 09-12-2020 |
|---|---|
| Page No | 3 |


### ನಾಗರಿಕ ಸಂಘಟನೆಗಳ ಒತ್ತಾಯ

# ಬಿಬಿಎಂಪಿ ಮಸೂದೆ: ಸಾರ್ವಜನಿಕ ಸಮಾಲೋಚನೆಗೆ ಅವಕಾಶ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಲಿಕೆ ಆಡಳಿತದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಬಿಬಿಎಂಪಿ ಮಸೂದೆ-2020 ರೂಪಿಸಿರುವುದು ಸ್ವಾಗತಾರ್ಹ. ಆದರೆ, ಮಸೂದೆ ವಿಚಾರದಲ್ಲಿ ಸಾರ್ವಜನಿಕ ಸಮಾಲೋಚನೆಯ ಕೊರತೆ ಎದ್ದು ಕಾಣುತ್ತಿದೆ. ಹಾಗಾಗಿ, ಸಾರ್ವಜನಿಕ ಸಮಾಲೋಚನೆ ನಡೆಯುವವರೆಗೆ ಮಸೂದೆಯನ್ನು ಮಂಡಿಸಬಾರದು' ಎಂದು ವಿವಿಧ ನಾಗರಿಕ ಸಂಸ್ಥೆಗಳು ಸರ್ಕಾರವನ್ನು ಕೋರಿವೆ.

'ಮಸೂದೆಯ ಬಗ್ಗೆ ವಿವರವಾಗಿ ಅಧ್ಯಯನ ನಡೆಸಬೇಕಿದೆ. ಮಸೂದೆಯ ಪ್ರತಿಯೊಂದು ಅಂಶಗಳ ಬಗ್ಗೆ ಚರ್ಚಿಸಬೇಕಿದೆ. ಮಸೂದೆಯನ್ನು ವಿಧಾನ ಮಂಡಲದ ಜಂಟಿ ಸಲಹಾ ಸಮಿತಿ ಮೂಲಕ ಪರಾಮರ್ಶೆಗೆ ಒಳಪಡಿಸಿರಬಹುದು. ಆದರೆ, ಈ ಬಗ್ಗೆ ಸಾರ್ವಜನಿಕ ಸಮಾಲೋಚನೆಗೆ ಅವಕಾಶ ನೀಡಬೇಕು'.

'ಬಿಬಿಎಂಪಿ ಮಸೂದೆ ಸಾಮಾನ್ಯ ಶಾಸನವಲ್ಲ. ಅದು, ಆಡಳಿತದ ಸ್ವರೂಪವನ್ನೇ ಬದಲಾಯಿಸುತ್ತದೆ. ಇದರ ಬಗ್ಗೆ ಸಮಾಲೋಚಿಸಲು ಸಮಯಾವಕಾಶ ಬೇಕು. ತರಾತುರಿಯಲ್ಲಿ ಮಸೂದೆಯನ್ನು ಮಂಡಿಸಬಾರದು' ಎಂದು ಕಾನೂನು ಸಚಿವ ಜೆ.ಸಿ. ಮಧುಸ್ವಾಮಿ ಹಾಗೂ ಜಂಟಿ ಆಯ್ಕೆ ಶಾಸಕಾಂಗ ಸಮಿತಿಯ ಅಧ್ಯಕ್ಷ ಎಸ್. ರಘು ಅವರಿಗೆ ಮನವಿ ಮಾಡಿವೆ.

ಇದಕ್ಕೆ ನಾಗರಿಕ ಸಂಸ್ಥೆಗಳಾದ ಸಿಟಿಜನ್ಸ್ ಫಾರ್ ಬೆಂಗಳೂರು, ವೈಟ್‌ಫೀಲ್ಡ್ ರೈಸಿಂಗ್, ಸಿವಿಕ್, ಸಿಎಎಫ್, ಸೆನ್ಸಿಂಗ್ ಲೋಕಲ್, ಜನಾಗ್ರಹ, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್, ಬಿ-ಪ್ಯಾಕ್ ಸಹಮತ ವ್ಯಕ್ತಪಡಿಸಿವೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| | |
|---|---|
| Date | 09-12-2020 |
| Page No | 3A |


# ಕೋವಿಡ್: ಪರೀಕ್ಷೆಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ತಿಂಗಳು ಬಹುತೇಕ ದಿನಗಳು ಲಕ್ಷದ ಗಡಿ ದಾಟಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ ಮೂರು ದಿನಗಳಿಂದ ಇಳಿಕೆ ಕಂಡಿದ್ದು, ಮಂಗಳವಾರ 88 ಸಾವಿರ ಮಂದಿಗೆ ಪರೀಕ್ಷೆ ನಡೆಸಲಾಗಿದೆ.

18 ಸಾವಿರ ಆ್ಯಂಟಿಜೆನ್ ಹಾಗೂ 70 ಸಾವಿರ ಆರ್‌ಟಿ-ಪಿಸಿಆರ್ ಪರೀಕ್ಷೆ ಸೇರಿದ್ದು, ರಾಜ್ಯದಲ್ಲಿ ಹೊಸದಾಗಿ 1,280 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 8.95 ಲಕ್ಷಕ್ಕೆ ಏರಿಕೆಯಾಗಿದೆ. ಈ ತಿಂಗಳು ಎಂಟು ದಿನಗಳ ಅವಧಿಯಲ್ಲಿ 10,387 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 1,298 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಸೋಂಕಿತರಲ್ಲಿ ಮತ್ತೆ 13 ಮಂದಿ ಮೃತಪಟ್ಟಿರುವುದು ದೃಢಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 11,880ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 1,060 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 8.58 ಲಕ್ಷ ದಾಟಿದೆ. ಸೋಂಕಿತರಲ್ಲಿ ಸದ್ಯ 25,015 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇವರಲ್ಲಿ 275 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಬೆಂಗಳೂರಿನಲ್ಲಿ 638 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.75 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 65 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 51,144ಕ್ಕೆ ತಲುಪಿದೆ. ಚಿತ್ರದುರ್ಗ (52), ಚಿಕ್ಕಬಳ್ಳಾಪುರ (50), ಹಾಸನ (49), ಚಿಕ್ಕಮಗಳೂರು ಹಾಗೂ ತುಮಕೂರಿನಲ್ಲಿ ತಲಾ 46 ಪ್ರಕರಣಗಳು ವರದಿಯಾಗಿವೆ.

## ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

**3,75,163** ಒಟ್ಟು ಸೋಂಕಿತರು



**3,51,497** ಗುಣಮುಖರಾದವರು

**19,468** ಸಕ್ರಿಯ ಪ್ರಕರಣ




### ಮಂಗಳವಾರದ ಏರಿಕೆ

**638** ದೃಢಪಟ್ಟ ಪ್ರಕರಣ

**432** ಗುಣಮುಖ

**7** ಸಾವು

## ಕೋವಿಡ್ ಪುನರ್ವಸತಿ ಕೇಂದ್ರ: 101 ಮಂದಿಗೆ ಚಿಕಿತ್ಸೆ

ಬೆಂಗಳೂರು: ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗಿರುವ ಕೋವಿಡ್ ಪುನರ್ವಸತಿ ಕೇಂದ್ರದಲ್ಲಿ ಈವರೆಗೆ 101 ಮಂದಿ ಚಿಕಿತ್ಸೆ ಪಡೆದಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಕಾರಣ ಅಲ್ಲಿ ಕೋವಿಡ್ ಪುನರ್ವಸತಿ ಕೇಂದ್ರವನ್ನು ನಡೆಸಲಾಗುತ್ತಿದೆ. ಈವರೆಗೆ ಅಲ್ಲಿ 1,554 ಕೋವಿಡ್ ಪೀಡಿತರು ಚಿಕಿತ್ಸೆಗೆ ಒಳಗಾಗಿದ್ದಾರೆ. ಆಸ್ಪತ್ರೆಯಿಂದ ಮನೆಗೆ ತೆರಳಿದ ಬಳಿಕವೂ ಕೆಲದಿನಗಳವರೆಗೆ ಅವರ ಆರೋಗ್ಯವನ್ನು ದೂರವಾಣಿಯ ಮೂಲಕ ವಿಚಾರಿಸಲಾಗುತ್ತಿದೆ. ಈ ವೇಳೆ ಕೆಲವರಲ್ಲಿ ಉಸಿರಾಟದ ಸಮಸ್ಯೆ, ಮೈಕೈ ನೋವು, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಿರುವುದು ತಿಳಿದುಬಂದಿದೆ.

‘ತಪಾಸಣೆ ಮಾಡಿಸಿಕೊಂಡವರಲ್ಲಿ 15 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಆಸ್ಪತ್ರೆಗೆ ಬಂದವರಲ್ಲಿ ಶೇ 33ರಷ್ಟು ಮಂದಿ ಉಸಿರಾಟದ ಸಮಸ್ಯೆ, ಶೇ 28ರಷ್ಟು ಜನರು ಕೆಮ್ಮು, ಶೇ 24 ರಷ್ಟು ಮಂದಿ ಶ್ವಾಸಕೋಶದ ಸಮಸ್ಯೆ ಹಾಗೂ ಶೇ 15ರಷ್ಟು ಮಂದಿ ಆಮ್ಲಜನಕದ ಕೊರತೆಯ ಜತೆಗೆ ಖಿನ್ನತೆ ಸೇರಿದಂತೆ ವಿವಿಧ ಮಾನಸಿಕ ಸಮಸ್ಯೆಗಳನ್ನೂ ಎದುರಿಸಿದ್ದಾರೆ’ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 09-12-2020 |
| --- | --- |
| Page No | 3B |


# ಕಸ ಪುನರ್ ಬಳಕೆ ಪಾರ್ಕ್ ಸ್ಥಾಪನೆ ಪ್ರಸ್ತಾವಕ್ಕೆ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ಥಳೀಯರ ಪ್ರತಿರೋಧದ ಕಾರಣದಿಂದ ಕನಕಪುರ ಹಾಗೂ ಮಧುಗಿರಿಯಲ್ಲಿ ಸಾವಿರ ಎಕರೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ತ್ಯಾಜ್ಯ ಪುನರ್ ಬಳಕೆ ಪಾರ್ಕ್ ಯೋಜನೆಯ ಪ್ರಸ್ತಾವನೆಯನ್ನು ತಡೆ ಹಿಡಿಯಲಾಗಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ಉತ್ತರ ನೀಡಿದ ಮಾಧುಸ್ವಾಮಿ, 'ನಗರದ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು' ಎಂದರು.

'ನಗರದಲ್ಲಿ ನಿತ್ಯ 5500 ಟನ್ ಕಸ ಉತ್ಪಾದನೆಯಾಗುತ್ತಿದೆ. ಮನೆಗಳಿಂದಲೇ 4 ಸಾವಿರ ಟನ್ ಕಸ ಸಂಗ್ರಹಿಸಲಾಗುತ್ತಿದೆ. ಕಸದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಎರಡು ವರ್ಷಗಳಲ್ಲಿ 4 ಸಾವಿರ ಟನ್ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳು ಕಾರ್ಯಾರಂಭ ಮಾಡಲಿವೆ. ಆಗ ಕಸ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದರು.

**ದೊಡ್ಡಬಳ್ಳಾಪುರಕ್ಕೆ ಸಂಸ್ಕರಿಸಿದ ನೀರು:** ದೊಡ್ಡಬಳ್ಳಾಪುರ ತಾಲ್ಲೂಕಿನ ಕೆರೆಗಳಿಗೆ ವೃಷಭಾವತಿ ನದಿಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಯೋಜನೆ ಮೂಲಕ ತುಂಬಿಸಲು ಯೋಜಿಸಲಾಗಿದೆ. ಈ ಯೋಜನೆಗೆ ₹1400 ಕೋಟಿ ವೆಚ್ಚ ಆಗಲಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಕಾಂಗ್ರೆಸ್‌ನ ಟಿ.ವೆಂಕಟರಮಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಮೊದಲ ಹಂತದಲ್ಲಿ ನೆಲಮಂಗಲಕ್ಕೆ (₹673 ಕೋಟಿ ವೆಚ್ಚ), ಬಳಿಕ ದಾಬಸ್‌ಪೇಟೆಗೆ (₹410 ಕೋಟಿ ವೆಚ್ಚ) ಹಾಗೂ ನಂತರ ದೊಡ್ಡಬಳ್ಳಾಪುರಕ್ಕೆ (₹415) ಸಂಸ್ಕರಿಸಿದ ನೀರು ಪೂರೈಸಲಾಗುವುದು. ದೊಡ್ಡಬಳ್ಳಾಪುರದ ಜನರಿಗೆ ಯೋಜನೆಯ ಲಾಭ ಸಿಗಲು ಎರಡು ವರ್ಷಗಳು ಬೇಕು' ಎಂದು ಹೇಳಿದರು.

**ಹೋರ್ಡಿಂಗ್‌ನಲ್ಲಿ ಲೂಟಿಗೆ ಅವಕಾಶ:** ಹೆಬ್ಬಾಳ ಮೇಲ್ಸೇತುವೆ ಮೇಲೆ 147 ಹೋರ್ಡಿಂಗ್‌ಗಳನ್ನು ಅಳವಡಿಸಲು ಖಾಸಗಿ ಸಂಸ್ಥೆಗೆ ಅವಕಾಶ ನೀಡಲಾಗಿದೆ. ಈ ಮೂಲಕ ಲೂಟಿಗೆ ಅನುವು ಮಾಡಿಕೊಡಲಾಗಿದೆ ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಆರೋಪಿಸಿದರು.

'ಸರ್ಕಾರಕ್ಕೆ ತಿಂಗಳಿಗೆ ₹2.5 ಕೋಟಿ ವರಮಾನ ಬರಲು ಸಾಧ್ಯವಿದೆ. ಆದರೆ, ಕಡಿಮೆ ಮೊತ್ತಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದವನ್ನು ಪರಾಮರ್ಶೆ ಮಾಡಬೇಕು' ಎಂದು ಆಗ್ರಹಿಸಿದರು.

ಕನ್ನಡಪ್ರಭ

| Date | 09-12-2020 |
|---|---|
| Page No | 3 |


# ಪಾಲಿಕೆ ಮೇಯರ್ ಅಧಿಕಾರ ಅವಧಿ 2.5 ವರ್ಷಕ್ಕೆ ಹೆಚ್ಚಿಸಲು ಶಿಫಾರಸು

**ಬಿಬಿಎಂಪಿಗೆ ಹೊಸ ಕಾಯ್ದೆ ಸದನ ಸಮಿತಿ ವರದಿ | ಸ್ಥಾಯಿ ಸಮಿತಿ ಸದಸ್ಯರ ಸಂಖ್ಯೆ 15ಕ್ಕೆ ಹೆಚ್ಚಿಸಿ**

**ಸರ್ಕಾರದ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಮುಖ್ಯ ಆಯುಕ್ತರನ್ನಾಗಿ ನೇಮಿಸಲು ಪ್ರಸ್ತಾಪ**

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೇಯರ್ ಅಧಿಕಾರ ಅವಧಿ 30 ತಿಂಗಳು ಇರಬೇಕು, ಸರ್ಕಾರದ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಮುಖ್ಯ ಆಯುಕ್ತರನ್ನಾಗಿ ನೇಮಕ ಮಾಡಬೇಕು ಹಾಗೂ ಸ್ಥಾಯಿ ಸಮಿತಿಗಳ ಸದಸ್ಯರ ಸಂಖ್ಯೆಯನ್ನು 12ರಿಂದ 15ಕ್ಕೆ ಹೆಚ್ಚಿಸಬೇಕೆಂದು ಬಿಬಿಎಂಪಿಗೆ ಪ್ರತ್ಯೇಕ ಹೊಸ ಕಾಯ್ದೆ ರಚನೆ ಕುರಿತು ರಚಿಸಲಾಗಿದ್ದ ಜಂಟಿ ಸದನ ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದೆ.

ಶಾಸಕ ಎಸ್.ರಘು ಅವರ ನೇತೃತ್ವದ 20 ಸದಸ್ಯರನ್ನು ಒಳಗೊಂಡ ಜಂಟಿ ಸದನ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿಯಲ್ಲಿ ಪ್ರಸ್ತುತ ಬಿಬಿಎಂಪಿಯ ಮೇಯರ್ ಅಧಿಕಾರ ಅವಧಿಯನ್ನು 12 ತಿಂಗಳಿಂದ 30 ತಿಂಗಳಿಗೆ ಹೆಚ್ಚಳ ಮಾಡುವುದು, ವಾರ್ಡ್ ಸಂಖ್ಯೆ 243ಕ್ಕೆ ಏರಿಕೆ, ಸ್ಥಾಯಿ ಸಮಿತಿ ಸದಸ್ಯರ ಸಂಖ್ಯೆಯನ್ನು 15ಕ್ಕೆ ಹೆಚ್ಚಳ ಮಾಡುವುದು, ಪ್ರತಿ ವಲಯಗಳಿಗೆ ಪಾಲಿಕೆ ಸದಸ್ಯರ ನೇತೃತ್ವದಲ್ಲಿ ಸಮಿತಿ ರಚನೆಗೆ ಅವಕಾಶ ನೀಡಿದ್ದು, ವಲಯ ಮಟ್ಟದಲ್ಲಿ ಒಬ್ಬ ಪಾಲಿಕೆ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಲು ವರದಿಯಲ್ಲಿ ಅವಕಾಶ ನೀಡಲಾಗಿದೆ.



**ಶಾಸಕ ಎಸ್. ರಘು ನೇತೃತ್ವದ ಜಂಟಿ ಸಮಿತಿ ವರದಿ**

ಇನ್ನು ಈಗಿನ ಮಾದರಿಯಂತೆ ಸರ್ಕಾರದ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತರನ್ನಾಗಿ ನೇಮಿಸುವುದು ಜತೆಗೆ, ಪ್ರತಿ ವಲಯಕ್ಕೂ ವಿಶೇಷ ಆಯುಕ್ತರು ಕಾರ್ಯನಿರ್ವಹಿಸಬೇಕು ಎಂದು ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಜಂಟಿ ಸದನ ಸಮಿತಿ ಸಲ್ಲಿಕೆ ಮಾಡಿರುವ ವರದಿಯನ್ನು ಕಾನೂನು ಸಚಿವರ ನೇತೃತ್ವದ ಪರಿಷ್ಕರಣಾ ಸಮಿತಿಯು ಪರಿಶೀಲನೆ ನಡೆಸಲಿದೆ. ಬಳಿಕ ರಾಜ್ಯ ಸರ್ಕಾರ ಉಭಯ ಸದನಗಳಿಗೆ ಮಂಡಿಸಿ ಅನುಮೋದನೆ ಪಡೆಯಬೇಕಾಗುತ್ತದೆ.

ಕನ್ನಡಪ್ರಭ

| Date | 09-12-2020 |
| --- | --- |
| Page No | 3 |


# ನಗರದಲ್ಲಿ ಮತ್ತೆ 600ರ ಗಡಿ ದಾಟಿದ ಸೋಂಕಿತರ ಸಂಖ್ಯೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮಂಗಳವಾರ 638 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 432 ಮಂದಿ ಗುಣಮುಖರಾಗಿದ್ದಾರೆ. ಏಳು ಮಂದಿ ಸೋಂಕಿನಿಂದ ಮೃತಪಟ್ಟ ವರದಿಯಾಗಿದೆ.



ಈ ಮೂಲಕ ನಗರದಲ್ಲಿ ಈವರೆಗಿನ ಒಟ್ಟು ಸೋಂಕಿತರ ಸಂಖ್ಯೆ 3,75,163ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,51,497ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 19,468ಕ್ಕೆ ಏರಿಕೆಯಾಗಿದ್ದು, ಈ ಪೈಕಿ ಆರೋಗ್ಯ ಸ್ಥಿತಿ ಗಂಭೀರವಾಗಿರುವ 130 ರೋಗಿಗಳನ್ನು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಂಗಳವಾರ ನಗರದಲ್ಲಿ ಒಟ್ಟು ಏಳು ಮಂದಿ ಸೋಂಕಿನಿಂದ ಮೃತಪಟ್ಟಿದ್ದು, ಈವರೆಗೆ ಸಾವನ್ನಪ್ಪಿದವರ ಸಂಖ್ಯೆ 4,197ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 09-12-2020 |
|---|---|
| Page No | 3 |

# ಕಸ ಮಂಡಳಿ ರಚನೆ ಪ್ರಸ್ತಾಪ ವಾರದಲ್ಲಿ ಸರ್ಕಾರಕ್ಕೆ ಸಲ್ಲಿಕೆ?

## ಬಿಬಿಎಂಪಿ ಚುನಾವಣೆಗೆ ಮುನ್ನವೇ ಮಂಡಳಿ ಅಸ್ತಿತ್ವಕ್ಕೆ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಕಸ ನಿರ್ವಹಣೆ ಹಾಗೂ ಕಸ ವಿಲೇವಾರಿಗೆ ಪ್ರತ್ಯೇಕ ಮಂಡಳಿ ರಚನೆಗೆ ಬಿಬಿಎಂಪಿ ಪ್ರಸ್ತಾವನೆ ಸಿದ್ಧ ಪಡಿಸಿದ್ದು, ವಾರದಲ್ಲಿ ಸರ್ಕಾರಕ್ಕೆ ಸಲ್ಲಿಸುವ ಸಾಧ್ಯತೆ ಇದೆ. ಕಳೆದ ಒಂದು ವರ್ಷದಿಂದ ಪ್ರತ್ಯೇಕ ಕಸ ಮಂಡಳಿ ರಚನೆ ಮಾಡುವ ಬಗ್ಗೆ ಸರ್ಕಾರ ಹಾಗೂ ನಗರಾಭಿವೃದ್ಧಿ ಇಲಾಖೆಯ ಮಟ್ಟದಲ್ಲೇ ಚರ್ಚೆಗಳು ನಡೆಯುತ್ತಲೇ ಇವೆ. ಆದರೆ, ಮಂಡಳಿಯ ರಚನೆಗೆ ಒಂದು ನಿರ್ದಿಷ್ಟ ರೂಪ ಸಿಕ್ಕಿರಲಿಲ್ಲ. ಇದೀಗ ಪಾಲಿಕೆ ಸದಸ್ಯರು ಸಹ ಇಲ್ಲದೆ ಇರುವುದರಿಂದ ಈ ಪ್ರಸ್ತಾವನೆ ಚುರುಕು ಪಡೆದುಕೊಂಡಿದೆ. ಪಾಲಿಕೆ ಸದಸ್ಯರು ಇಲ್ಲದ ಕಾರಣ ಮಂಡಳಿ ರಚನೆ ಮಾಡುವ ಮಾರ್ಗ ಸುಗಮವಾದಂತಾಗಿದ್ದು, ಚುನಾವಣೆಗೆ ಮುನ್ನವೇ ಮಂಡಳಿ ಅಸ್ತಿತ್ವಕ್ಕೆ ಬರುವ ಸಾಧ್ಯತೆ ಇದೆ.

**ಪಾಲಿಕೆ ಅಧೀನದಲ್ಲಿ ಮಂಡಳಿ ಕಾರ್ಯ:** ನಗರದಲ್ಲಿ ಜಲಮಂಡಳಿ, ಬೆಸ್ಕಾಂ ಹಾಗೂ ಬಿಡಿಎ ಸೇರಿದಂತೆ ವಿವಿಧ ಮಂಡಳಿಗಳೊಂದಿಗೆ ಪಾಲಿಕೆ ಸಮನ್ವಯತೆ ಕೊರತೆ ಎದುರಿಸುತ್ತಿದೆ ಎಂಬ ಆರೋಪ ವ್ಯಕ್ತವಾಗಿದೆ. ಇದೀಗ ಮತ್ತೊಂದು ಮಂಡಳಿ ರಚನೆಯಾದರೆ, ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆಯೂ ಇದೆ ಎನ್ನುವ ಬಗ್ಗೆಯೂ ಚರ್ಚೆ ನಡೆದಿದೆ. ಹೀಗಾಗಿ, ಕಸ ಸಂಗ್ರಹ ಹಾಗೂ ವಿಲೇವಾರಿಗೆ ಪ್ರತ್ಯೇಕ ಮಂಡಳಿ ರಚನೆಯಾದರೂ, ಆದರ ಒಟ್ಟಾರೆ ಜವಾಬ್ದಾರಿಯನ್ನು ಪಾಲಿಕೆಯೇ ನಿರ್ವಹಣೆ ಮಾಡಲಿದೆ.

### ಆದಾಯ ಹೆಚ್ಚಿಸಲು ಯೋಜನೆ

ಕಸ ನಿರ್ವಹಣೆ ಮತ್ತು ವಿಲೇವಾರಿಗೆ ವಾರ್ಷಿಕ ಸುಮಾರು ಒಂದು ಸಾವಿರ ಕೋಟಿ ರುಪಾಯಿಗಿಂತ ಅಧಿಕ ವೆಚ್ಚ ಮಾಡಲಾಗುತ್ತಿದೆ. ಆದರೆ, ಉತ್ಪಾದಕರಿಂದ ತೆರಿಗೆ ರೂಪದಲ್ಲಿ ಕೇವಲ ₹50 ಕೋಟಿ ಸಂಗ್ರಹವಾಗುತ್ತಿದೆ. ನಿರ್ವಹಣೆ ಹೊರೆ ಕಡಿಮೆ ಮಾಡಿಕೊಳ್ಳಲು ಹಸಿ ಕಸವನ್ನು ಸಾವಯವ ಗೊಬ್ಬರ ಉತ್ಪಾದನೆ, ವಿದ್ಯುತ್ ಉತ್ಪಾದನೆಗೆ ಹಾಗೂ ಪ್ಲಾಸ್ಟಿಕನ್ನು ಸಿಮೆಂಟ್ ಮತ್ತು ಡಾಂಬರ್ ನಿರ್ಮಾಣ ಕಾರ್ಯಕ್ಕೆ, ಮಾಂಸದ ತ್ಯಾಜ್ಯವನ್ನು ಮೀನಿನ ಆಹಾರ ಉತ್ಪಾದನೆಗೆ ಸೇರಿ ವಿವಿಧ ವಿಭಾಗದಲ್ಲಿ ಬಳಕೆ ಮಾಡಲಾಗುತ್ತಿದೆ. ಎಲ್ಲ ಆದಾಯ ಸಂಗ್ರಹಿಸಿ ನಿರ್ವಹಣೆ ಮಾಡಲು ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗದಿಂದ ಪ್ರತ್ಯೇಕ ಮಂಡಳಿ ರಚನೆ ಅಗತ್ಯವಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಜಾಹೀರಾತು ಅಳವಡಿಕೆಗೆ ಅನುಮತಿ ಕೊಟ್ಟಿದ್ದಕ್ಕೆ ಕ್ರಮ

## ಸಿಎಂ ಜೊತೆ ಚರ್ಚಿಸಿ ನಿರ್ಧಾರ: ಸಚಿವ ಮಾಧುಸ್ವಾಮಿ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಬೆಂಗಳೂರು ನಗರದ ಹೆಬ್ಬಾಳ ಮೇಲ್ಸೇತುವೆ ಕೆಳಗೆ ಖಾಸಗಿ ಸಂಸ್ಥೆಯೊಂದಕ್ಕೆ 147 ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಬೇಕು ಎಂಬುದನ್ನು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಕೃಷ್ಣ ಬೈರೇಗೌಡ ಅವರು ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳ ಪರವಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಉತ್ತರ ನೀಡಿದರು. ಅವಿನಾಶಿ ಆಡ್ಸ್ ಅವರಿಗೆ ಹೆಬ್ಬಾಳದ ಮೇಲ್ಸೇತುವೆ ಕೆಳಗೆ 147 ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಲಾಗಿದೆ. 30 ವರ್ಷಗಳ ಕಾಲ ಜಾಹೀರಾತು ಫಲಕ ಹಾಕುವ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗಿದೆ. ಚದರಡಿಗೆ ₹360 ನಿಗದಿ ಮಾಡಲಾಗಿದ್ದು, ಪ್ರಸ್ತುತ 61,780 ಚದರಡಿ ಪ್ರದರ್ಶನ ಫಲಕಗಳಿಂದ ಸರ್ಕಾರಕ್ಕೆ ₹2.23 ಕೋಟಿ ಆದಾಯ ಬರಲಿದೆ. ಅಲ್ಲದೇ, ಈ ವಿಚಾರದಲ್ಲಿ ಯಾರು ಮಧ್ಯ ಪ್ರವೇಶಿಸುವಂತಿಲ್ಲ ಎಂಬ ಆದೇಶವನ್ನು ನ್ಯಾಯಾಲಯದಿಂದ ತರಲಾಗಿದೆ. ಇಂತಹ ಸ್ಥಿತಿಯಲ್ಲಿ ಏನು ಮಾಡಲು ಸಾಧ್ಯವಿಲ್ಲ ಎಂದು ಅಸಹಾಯಕತೆ ತೋರಿದರು.

ಈ ವೇಳೆ ಕೃಷ್ಣ ಬೈರೇಗೌಡ ಮಾತನಾಡಿ, ಹೆಬ್ಬಾಳ ಮೇಲ್ಸೇತುವೆ ಕೆಳಗೆ ಈ ಮೊದಲು 52 ಜಾಹೀರಾತು ಫಲಕಗಳನ್ನು ಹಾಕಲು ಅನುಮತಿ ನೀಡಲಾಗಿತ್ತು. ಇದೀಗ 147 ಜಾಹೀರಾತು ಫಲಕಗಳನ್ನು ಹಾಕಲು ಅನುಮತಿ ನೀಡಿರುವುದು ಸರಿಯಲ್ಲ. ಖಾಸಗಿ ಕಂಪನಿಯರು ಮೇಲ್ಸೇತುವೆ ಬಳಿ ಸ್ವಚ್ಛಗೊಳಿಸಿ, ಸೌಂದರ್ಯಗೊಳಿಸಲು ₹98 ಲಕ್ಷ ಖರ್ಚು ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ತಕ್ಷಣ ಈ ಬಗ್ಗೆ ಪರಾಮರ್ಶಿಸಬೇಕು ಎಂದು ಹೇಳಿದರು.

### ಹೊಸ ಜಾಹೀರಾತು ನೀತಿಗೆ ಚಿಂತನೆ

**ಮ**ನಬಂದಂತೆ ತಲೆ ಎತ್ತುತ್ತಿರುವ ಜಾಹೀರಾತು ಫಲಕಗಳಿಗೆ ಕಡಿವಾಣ ಹಾಕುವ ಸಂಬಂಧ ಹೊಸ ಜಾಹೀರಾತು ನೀತಿ ಜಾರಿ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಬಿಜೆಪಿ ಸದಸ್ಯ ಮತ್ತು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದ್ದಾರೆ. ಸರಿಯಾಗಿ ಜಾಹೀರಾತು ನೀತಿ ಇಲ್ಲ. ಹೀಗಾಗಿ ಜಾಹೀರಾತು ಫಲಕಗಳಿಗೆ ನಿಯಂತ್ರಣ ಹೇರಲು ಸಾಧ್ಯವಾಗುತ್ತಿಲ್ಲ. ಹೊಸ ನೀತಿಯನ್ನು ಜಾರಿಗೊಳಿಸದಿದ್ದರೆ ಸರ್ಕಾರಕ್ಕೆ ನಷ್ಟವಾಗಲಿದೆ.

ಕನ್ನಡಪ್ರಭ

| Date | 09-12-2020 |
| --- | --- |
| Page No | 3 |


# ಕೊನೆಗೂ ಮಾತೃ ಇಲಾಖೆಗೆ ಪಶ್ಚಿಮ ಜಂಟಿ ಆಯುಕ್ತ ವರ್ಗ

## ಅರ್ಹತೆ ಇಲ್ಲದಿದ್ದರೂ ಹುದ್ದೆ ನಿರ್ವಹಿಸಿದ ಹಿನ್ನೆಲೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿಯ ಪಶ್ಚಿಮ ವಲಯದ ಜಂಟಿ ಆಯುಕ್ತ ಎನ್.ಚಿದಾನಂದ ಅವರನ್ನು ಮಾತೃ ಇಲಾಖೆಗೆ ವರ್ಗಾವಣೆ ಮಾಡಿ ಬಿಬಿಎಂಪಿಯ ಉಪ ಆಯುಕ್ತ (ಆಡಳಿತ) ಅವರು ಆದೇಶ ಹೊರಡಿಸಿದ್ದಾರೆ.

ಕೃಷಿ ಇಲಾಖೆಯಿಂದ ಎರವಲು ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಎನ್.ಚಿದಾನಂದ ಅವರಿಗೆ ಕೆಲವು ನಿರ್ದಿಷ್ಟ ಷರತ್ತುಗಳಿಗೆ ಒಳಪಡಿಸಿ ವರ್ಗಾವಣೆ ಮಾಡಲಾಗಿದ್ದು, ರಾಜರಾಜೇಶ್ವರಿ ನಗರದ ಜಂಟಿ ಆಯುಕ್ತರಾದ ನಾಗರಾಜು ಅವರಿಗೆ ಹೆಚ್ಚುವರಿಯಾಗಿ ಪಶ್ಚಿಮ ವಲಯದ ಜಂಟಿ ಆಯುಕ್ತರ ಜವಾಬ್ದಾರಿ ನೀಡಿ ಆದೇಶ ಹೊರಡಿಸಲಾಗಿದೆ.

ಕೃಷಿ ಇಲಾಖೆ ಉಪ ನಿರ್ದೇಶಕರಾಗಿದ್ದರೂ ಚಿದಾನಂದ್ ತಮ್ಮ ಪ್ರಭಾವ ಬಳಸಿಕೊಂಡು ಕೆಎಎಸ್ ತತ್ಸಮಾನ ಹುದ್ದೆಯಾದ ಜಂಟಿ ಆಯುಕ್ತ ಹುದ್ದೆ ಅಲಂಕರಿಸಿದ್ದರು. ಎರಡು ಬಾರಿ ರಾಜ್ಯ ಸರ್ಕಾರ ಎನ್.ಚಿದಾನಂದ ಅವರನ್ನು ಬಿಬಿಎಂಪಿ ಸೇವೆಯಿಂದ ಬಿಡುಗಡೆಗೊಳಿಸುವಂತೆ ಆದೇಶಿಸಲಾಗಿತ್ತು. ಆದರೆ, ನಗರ ಕೊರೋನಾ ಸೋಂಕು ನಿಯಂತ್ರಣ ಕಾರ್ಯದಲ್ಲಿ ಭಾಗಿಯಾಗಿರುವ ನೆಪ ಹೇಳಿ ಚಿದಾನಂದ್ ಬಿಬಿಎಂಪಿಯಲ್ಲಿಯೇ ಮುಂದುವರೆದಿದ್ದರು.

ಬಿಬಿಎಂಪಿಯ ಜಂಟಿ ಆಯುಕ್ತರಾಗಿ ಕಾರ್ಯನಿರ್ವಹಿಸಲು ಭಾರತೀಯ ಆಡಳಿತ ಸೇವೆ (ಐಎಎಸ್) ಪ್ರೊಬೆಷನರಿ, ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಥವಾ ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಮುನ್ಸಿಪಲ್ ಸರ್ವಿಸ್ (ಕೆಎಂಎಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಆದರೆ, ಬಿಬಿಎಂಪಿಯಲ್ಲಿ ಅರ್ಹತೆ ಇಲ್ಲದಿದ್ದರೂ ಘನತ್ಯಾಜ್ಯ ವಿಭಾಗದ ಸರ್ಫರಾಜ್ ಖಾನ್ (ಸಹಕಾರ ಇಲಾಖೆ), ದಕ್ಷಿಣ ವಲಯ ವೀರಭದ್ರಸ್ವಾಮಿ, ಬೊಮ್ಮನಹಳ್ಳಿ ವಲಯ ಎಂ.ರಾಮಕೃಷ್ಣ (ಕೆಎಸ್ಎಫ್‌ಸಿ) ಅವರು ಜಂಟಿ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ಆಗಸ್ಟ್‌ನಲ್ಲಿಯೇ ಈ ಅಧಿಕಾರಿಗಳನ್ನು ಮಾತೃ ಇಲಾಖೆ ವಾಪಾಸ್ ಕಳುಹಿಸುವಂತೆ ಕೋರಿ ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪತ್ರ ಬರೆದಿದ್ದರು.

ಕನ್ನಡಪ್ರಭ

| Date | 09-12-2020 |
| --- | --- |
| Page No | 3 |


**ತ್ಯಾಜ್ಯದಿಂದ ವಿದ್ಯುತ್** ನಗರದಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ವಿದ್ಯುತ್ ಘಟಕ ಸ್ಥಾಪನೆ

# ಎರಡು ವರ್ಷದಲ್ಲಿ ತ್ಯಾಜ್ಯ ವಿದ್ಯುತ್ ಘಟಕ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಬೃಹತ್‌ಬೆಂಗಳೂರುಮಹಾನಗರಪಾಲಿಕೆವ್ಯಾಪ್ತಿಯಲ್ಲಿನ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಕ್ರಮ ಕೈಗೊಳ್ಳಲಾಗುತ್ತಿದ್ದು, ಮುಂದಿನ ಎರಡು ವರ್ಷದಲ್ಲಿವೈಜ್ಞಾನಿಕವಾಗಿಸಂಸ್ಕರಣೆಮಾಡಿ ತ್ಯಾಜ್ಯದಿಂದವಿದ್ಯುತ್‌ಉತ್ಪಾದನೆಮಾಡುವ ಘಟಕಗಳನ್ನುಆರಂಭಿಸಲಾಗುವುದುಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಆಶ್ವಾಸನೆ ನೀಡಿದ್ದಾರೆ.

ಮಂಗಳವಾರಪ್ರಶ್ನೋತ್ತರಅವಧಿಯಲ್ಲಿ ಕಾಂಗ್ರೆಸ್‌ಸದಸ್ಯಎನ್‌.ಎ.ಹ್ಯಾರಿಸ್‌ಪ್ರಶ್ನೆಗೆ ಮುಖ್ಯಮಂತ್ರಿಗಳಪರವಾಗಿಉತ್ತರನೀಡಿದ ಅವರು, ಪ್ರತಿ ದಿನ ಸುಮಾರು ನಾಲ್ಕುವರೆ ಮೆಟ್ರಿಕ್ ಟನ್‌ನಷ್ಟು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.



• ನಿತ್ಯ 4.5 ಟನ್ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಗುರಿ

ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಖಾಯಂಪರಿಹಾರಒದಗಿಸಲುಕ್ರಮಕೈಗೊಳ್ಳಲಾಗುತ್ತಿದೆ. ಈ ಹಿಂದೆ ಮಧುಗಿರಿ ಮತ್ತು ಕನಕಪುರದಲ್ಲಿ ಸಾವಿರ ಎಕರೆ ಪ್ರದೇಶದಲ್ಲಿ ತ್ಯಾಜ್ಯಪುನರ್ ಬಳಕೆ ಪಾರ್ಕ್ ಸ್ಥಾಪನೆ ಮಾಡುವ ಸಂಬಂಧ ಪ್ರಸ್ತಾವನೆ ಇತ್ತು. ಆದರೆ, ಈ ಪ್ರದೇಶದಲ್ಲಿ ಸ್ಥಳೀಯರಿಂದ ಪ್ರತಿರೋಧ ವ್ಯಕ್ತವಾಗಿರುವುದರಿಂದ ಸದ್ಯಕ್ಕೆ ಪ್ರಸ್ತಾವನೆಯನ್ನು ತಡೆಹಿಡಿಯಲಾಗಿದೆ. ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಐದು ಕಂಪನಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಪೈಕಿ ಎರಡು ಸಂಸ್ಥೆಗಳಿಂದ ಘಟಕಗಳ ಸಿದ್ಧತಾ ಕಾರ್ಯ ನಡೆಯುತ್ತಿದ್ದು, ಮುಂದಿನ ಎರಡು ವರ್ಷದಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಲಿವೆ ಎಂದು ಮಾಹಿತಿ ನೀಡಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ವತಿಯಿಂದ ಬಿಡದಿಯಲ್ಲಿ ಪ್ರತಿದಿನ 600 ಮೆಟ್ರಿಕ್ ಟನ್ ಸಾಮರ್ಥ್ಯದ ಘನತ್ಯಾಜ್ಯ ಉಪಯೋಗಿಸಿ 11.50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಯೋಜನೆಯು ₹260 ಕೋಟಿಗೆ ಅನುಮೋದನೆಗೊಂಡು ಕಾರ್ಯದೇಶ ನೀಡಲಾಗಿದೆ. ಸಾರ್ವಜನಿಕಖಾಸಗಿಸಹಭಾಗಿತ್ವ(ಪಿಪಿಪಿ) ಮಾದರಿಯಲ್ಲಿ ಸತಾರೆಂ ಎಂಟರ್‌ಪ್ರೈಸಸ್ ಪ್ರೈ.ಲಿ. ವತಿಯಿಂದ ಪ್ರತಿದಿನ ಒಂದು ಸಾವಿರ ಮೆಟ್ರಿಕ್ ಟನ್ ಮಿಶ್ರ ಘನತ್ಯಾಜ್ಯವನ್ನು ಉಪಯೋಗಿಸಿ, 12 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಕನ್ನಲ್ಲಿ ಘಟಕದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಯೋಜನೆಯು ಮುಂದಿನ 2 ವರ್ಷದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇನ್ನು, ಪಿಪಿಪಿ ಮಾದರಿಯಲ್ಲಿ ಇಂಡಿಯಂ ಸಂಸ್ಥೆಯಿಂದ 300 ಮೆಟ್ರಿಕ್ ಟನ್ ಪ್ರತಿದಿನಮಿಶ್ರ ಘನತ್ಯಾಜ್ಯವನ್ನು ಉಪಯೋಗಿಸಿ 4 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಘಟಕವನ್ನು ದೊಡ್ಡ ಬಿದರಕಲ್ಲು ಘಟಕದಲ್ಲಿ ಸ್ಥಾಪಿಸಲು ಸರ್ಕಾರವು ಅನುಮೋದನೆ ನೀಡಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಯೋಜನೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದರು.

ಪಿಪಿಪಿ ಮಾದರಿಯಲ್ಲಿ ಮಾವಳ್ಳಿಪುರ ಘಟಕದಲ್ಲಿ ಫರ್ಮ್‌ಗ್ರೀನ್ ಸಂಸ್ಥೆಯಿಂದ ಪ್ರತಿದಿನ ಒಂದು ಸಾವಿರ ಮೆಟ್ರಿಕ್ ಟನ್ ಘನತ್ಯಾಜ್ಯ ಉಪಯೋಗಿಸಿ ಸಂಕುಚಿತ ನೈಸರ್ಗಿಕ ಅನಿಲ ಉತ್ಪಾದನೆ ಮಾಡಲು ಸರ್ಕಾರವು ಅನುಮೋದನೆ ನೀಡಿದೆ. ಅಂತೆಯೇ ಇನ್ನಿತರೆ ಎರಡು ಯೋಜನೆಗಳಾದ ಮಾರೇನಹಳ್ಳಿ ಸ್ಥಳದಲ್ಲಿ 600 ಮೆಟ್ರಿಕ್ ಟನ್ ಪ್ರತಿದಿನ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡಲು ನೆಕ್ಸ್ ನೋವಸ್ ಸಂಸ್ಥೆಯವರಿಗೆ ಒಪ್ಪಂದ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಕನ್ನಡಪ್ರಭ

| Date | 09-12-2020 |
| --- | --- |
| Page No | 4 |


# ಸಾಗರ್ ಆಸ್ಪತ್ರೆಗೆ ₹1 ಲಕ್ಷ ದಂಡ

ಬೆಂಗಳೂರು: ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡದ ಸಾಗರ್ ಆಸ್ಪತ್ರೆಗೆ ಬಿಬಿಎಂಪಿ ಮಾರ್ಷಲ್ ಮತ್ತು ಆರೋಗ್ಯ ಅಧಿಕಾರಿಗಳು ₹1 ಲಕ್ಷ ದಂಡ ವಿಧಿಸಿದ್ದಾರೆ. ಕುಮಾರಸ್ವಾಮಿ ಲೇಔಟ್‌ನ ಸಾಗರ್ ಆಸ್ಪತ್ರೆಯಲ್ಲಿ ಘನತ್ಯಾಜ್ಯದೊಂದಿಗೆ ಬಯೋ ತ್ಯಾಜ್ಯ ಮಿಶ್ರಣ ಮಾಡಿ ವಿಲೇವಾರಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಕೂಡಲೇ ಆಸ್ಪತ್ರೆಗೆ ಒಂದು ಲಕ್ಷ ರು. ದಂಡ ವಿಧಿಸಲಾಗಿದೆ.

VK ವಿಜಯ ಕರ್ನಾಟಕ

| Date | 09-12-2020 |
| --- | --- |
| Page No | 7 |


ಆನಂದರಾವ್ ವೃತ್ತದಲ್ಲಿ ತಲೆ ಎತ್ತಲಿದೆ 59 ಅಂತಸ್ತಿನ ಕಟ್ಟಡ | 30 ತಿಂಗಳಲ್ಲಿ ನಿರ್ಮಾಣ ಗುರಿ

# ನಗರದಲ್ಲಿ ಗಗನಚುಂಬಿ ಅವಳಿ ಕಟ್ಟಡ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯ ಹೃದಯ ಭಾಗವಾಗಿರುವ ಆನಂದರಾವ್ ವೃತ್ತದಲ್ಲಿನ ಐದೂವರೆ ಎಕರೆ ಪ್ರದೇಶದಲ್ಲಿ 59 ಅಂತಸ್ತುಗಳ ಭವ್ಯ ಅವಳಿ ಗೋಪುರ ನಿರ್ಮಾಣವಾಗಲಿದೆ. ಬಹುಮಹಡಿಯ ಅವಳಿ ಗೋಪುರವನ್ನು 1158.24 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಲೋಕೋಪಯೋಗಿ ಇಲಾಖೆ ಸಲ್ಲಿಸಿದ್ದ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ.

ಆನಂದರಾವ್ ವೃತ್ತದಲ್ಲಿ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತ ಕಚೇರಿ, ಮುಖ್ಯ ಎಂಜಿನಿಯರ್, ಡೆಬ್ಲ್ಯುಆರ್‌ಡಿಒ ಕಚೇರಿ, ಮುಖ್ಯ ಎಂಜಿನಿಯರ್, ಸಿಎ, ಸಿಎಂಟಿ ಕಚೇರಿ, ಆರೋಗ್ಯ ಇಲಾಖೆ ಹಾಗೂ ಇನ್ನಿತರ ಸರಕಾರಿ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಕಟ್ಟಡಗಳು 1940ಕ್ಕಿಂತ ಮೊದಲು ನಿರ್ಮಿಸಿದವು. ಈ ಆವರಣದಲ್ಲಿ 2013ರಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಪಂಚಾಯತ್ ರಾಜ್ ಇಲಾಖೆಯ ಆರ್‌ಡಿಪಿಆರ್ ಭವನದ ಕಟ್ಟಡ ಹೊರತುಪಡಿಸಿ, ಉಳಿದ ಹಳೆಯ ಕಟ್ಟಡಗಳನ್ನು ಯೋಜನಾಬದ್ಧವಾಗಿ ನಿರ್ಮಿಸಿಲ್ಲ. ಹಾಗಾಗಿ, ಹಳೆ ಕಟ್ಟಡಗಳನ್ನು ಕೆಡವಿ, ಆ ಜಾಗದಲ್ಲಿ ಹಲವು ಕಚೇರಿಗಳನ್ನೊಳಗೊಂಡ ಅವಳಿ ಕಟ್ಟಡವನ್ನು 30 ತಿಂಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅವಳಿ ಕಟ್ಟಡ ತಲೆ ಎತ್ತಲಿದೆ. ಇದಕ್ಕೆ ರಾಜ್ಯ ಸರಕಾರದಿಂದ ಯಾವುದೇ ವೆಚ್ಚ ಮಾಡುತ್ತಿಲ್ಲ. ಹೊಸದಿಲ್ಲಿಯ ರಾಷ್ಟ್ರೀಯ ಕಟ್ಟಡಗಳ ನಿರ್ಮಾಣ ನಿಗಮ ಲಿಮಿಟೆಡ್ (ಎನ್‌ಬಿಸಿಸಿ) ಸಂಸ್ಥೆಯೇ ನಿರ್ಮಾಣದ ವೆಚ್ಚ ಭರಿಸಲಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ 60:40ರ ಅನುಪಾತದಲ್ಲಿ ನಿರ್ಮಾಣ ಪ್ರದೇಶವನ್ನು ಹಂಚಿಕೆ ಮಾಡಲಾಗುತ್ತದೆ.

ಸಿಎಂ ಬಿ.ಎಸ್.ಯಡಿಯೂರಪ್ಪ ಅವರು 2020-21ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು 400 ಕೋಟಿ ರೂ. ವೆಚ್ಚದಲ್ಲಿ 25 ಅಂತಸ್ತುಗಳ ಬಹುಮಹಡಿ ಕಟ್ಟಡ ಕಚೇರಿ ಸಂಕೀರ್ಣ ನಿರ್ಮಾಣದ ಪ್ರಸ್ತಾಪ ಮಾಡಿದ್ದರು. ಈ ಸಂಬಂಧ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸೂಚಿಸಿದ್ದರು. 2020ರ ಜೂ. 3ರಂದು ಸಿಎಂ ಅಧ್ಯಕ್ಷತೆಯಲ್ಲಿ ನಡೆದ ಲೋಕೋಪಯೋಗಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಅವರು ಅವಳಿ ಕಟ್ಟಡ ನಿರ್ಮಾಣ ಯೋಜನೆಯನ್ನು ಸರಕಾರದ ಅನುದಾನದಲ್ಲಿ ಕೈಗೊಳ್ಳುವ ಬದಲಿಗೆ ಎನ್‌ಬಿಸಿಸಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ವಹಿಸುವಂತೆ ಸೂಚಿಸಿದ್ದರು.

**ಹಳೆ ಕಟ್ಟಡ ಕೆಡವಿ ಪಿಪಿಪಿ ಮಾದರಿಯಲ್ಲಿ ನಿರ್ಮಾಣ**

**ನಿರ್ಮಾಣ ವೆಚ್ಚ ಭರಿಸಲಿದೆ ಹೊಸದಿಲ್ಲಿಯ ಎನ್‌ಬಿಸಿಸಿ**



**4 ಕಿ.ಮೀ. ಉದ್ದದ ಸ್ಕೈವಾಕ್ ನಿರ್ಮಾಣ**

ಅವಳಿ ಗೋಪುರದಿಂದ ಸಮೀಪದಲ್ಲಿನ ಕೆಂಪೇಗೌಡ ಮೆಟ್ರೊ ನಿಲ್ದಾಣ, ರೈಲು ನಿಲ್ದಾಣ, ಮೆಜೆಸ್ಟಿಕ್ ಬಸ್ ನಿಲ್ದಾಣ ಮತ್ತು ವಿಧಾನಸೌಧಕ್ಕೆ ಸಂಪರ್ಕ ಕಲ್ಪಿಸಲು 4 ಕಿ.ಮೀ. ಉದ್ದದ ಎಸ್ಕಲೇಟರ್ ಸಹಿತ ಸ್ಕೈವಾಕ್ ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ. 200 ಕೋಟಿ ರೂ. ಸಿಎಸ್‌ಆರ್ ಅನುದಾನದಲ್ಲಿ ಸ್ಕೈವಾಕ್ ನಿರ್ಮಿಸಲು ಉದ್ದೇಶಿಸಲಾಗಿದೆ. ಇದರಿಂದ ಸಾರ್ವಜನಿಕರು ಸುಲಭವಾಗಿ ಮೆಜೆಸ್ಟಿಕ್‌ನಿಂದ ಅವಳಿ ಗೋಪುರದಲ್ಲಿನ ಕಚೇರಿಗಳಿಗೆ ಹಾಗೂ ವಿಧಾನಸೌಧಕ್ಕೆ ಕಾಲ್ನಡಿಗೆಯಲ್ಲೇ ತೆರಳಬಹುದಾಗಿದೆ.

## ಅವಳಿ ಗೋಪುರದ ವಿಶೇಷತೆಗಳು

- ಆನಂದರಾವ್ ವೃತ್ತದಲ್ಲಿನ ಒಟ್ಟು ವಿಸ್ತೀರ್ಣ **8.30** ಎಕರೆ
- ಆರ್‌ಡಿಪಿಆರ್‌ನ ನೂತನ ಕಟ್ಟಡದ ವಿಸ್ತೀರ್ಣ **3.07** ಎಕರೆ
- ಖಾಲಿ ಉಳಿದಿರುವ ಪ್ರದೇಶ **5.23** ಎಕರೆ
- **5.25** ಎಕರೆಯಲ್ಲಿ ಅವಳಿ ಗೋಪುರ ನಿರ್ಮಾಣ
- ನಿರ್ಮಿಸಲು ಉದ್ದೇಶಿಸಿರುವ ಕಟ್ಟಡ ವಿಸ್ತೀರ್ಣ **23,94,007** ಚ.ಅಡಿ
- ನಿರ್ಮಾಣ ವೆಚ್ಚ **1158.24** ಕೋಟಿ ರೂ.
- 4 ಕಿ.ಮೀ ಉದ್ದದ ಸ್ಕೈವಾಕ್ ನಿರ್ಮಾಣಕ್ಕೆ **200** ಕೋಟಿ ರೂ. ವೆಚ್ಚ
- 3 ತಳಮಹಡಿ, ನೆಲಮಹಡಿ ಮತ್ತು **59** ಅಂತಸ್ತುಗಳ ನಿರ್ಮಾಣ

ವಿಜಯ ಕರ್ನಾಟಕ

| Date | 09-12-2020 |
|---|---|
| Page No | 7 |

# ಹೋರ್ಡಿಂಗ್ ಹೆಸರಿನಲ್ಲಿ ಲೂಟಿ ವಿರುದ್ಧ ಕ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ ಹೋರ್ಡಿಂಗ್ ಹೆಸರಲ್ಲಿ ನಡೆದಿರುವ ಲೂಟಿ ಬಗ್ಗೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರಕಾರ ಭರವಸೆ ನೀಡಿದೆ.

ವಿಧಾನಸಭೆಯಲ್ಲಿ ಮಂಗಳವಾರ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಕೃಷ್ಣಬೈರೇಗೌಡ, "ಹೋರ್ಡಿಂಗ್ ಕಂಪೆನಿಯೊಂದು ಲೂಟಿ ಮಾಡುತ್ತಿದೆ. ಖಾಸಗಿಯವರು ಬೆಳೆಯಲಿ, ನಾಲ್ಕು ಜನರಿಗೆ ಕೆಲಸ ಸಿಗಲಿ. ಆದರೆ, ಬಿಡಿಎಗೂ ಆದಾಯ ಬರಬೇಕು. ಓವರ್ ಹೆಡ್ ಹೋರ್ಡಿಂಗ್‌ನಲ್ಲಿ ಪ್ರತಿ ತಿಂಗಳಿಗೆ 1 ಲಕ್ಷಕ್ಕೂ ಹೆಚ್ಚು ಹಣ ತೆಗೆದುಕೊಳ್ಳುತ್ತಾರೆ. 148 ಹೋರ್ಡಿಂಗ್ ಹಾಕಿರುವ ಟೆಂಡರ್ ದಾರರು ಪಾರ್ಕ್ ನಿರ್ವಹಣೆ ಹೆಸರಲ್ಲಿ ಕೇವಲ 98 ಲಕ್ಷ ರೂ. ಬಂಡವಾಳ ಹೂಡಿಕೆ ಮಾಡಿದರೆ ಹೇಗೆ ?" ಎಂದು ಪ್ರಶ್ನಿಸಿದರು.

ಕಾನೂನು ಸಚಿವ ಮಾಧುಸ್ವಾಮಿ ಮಾತನಾಡಿ, "ಗಿಡ ನೆಡುವುದು, ಡಿವೈಡರ್ ಹಾಕುವುದು, ಕಿರು ಅರಣ್ಯ ನಿರ್ವಹಣೆಗೆ 2018ರಲ್ಲಿ ಟೆಂಡರ್ ಆಗಿದೆ. ಹೆಚ್ಚು ಲಾಭ ಖಾಸಗಿಯವರಿಗೆ ಸಿಗುವುದನ್ನು ನಾವು ಒಪ್ಪುತ್ತೇವೆ. ಆದರೆ, ಟೆಂಡರ್ ಆಗಿದೆ. ಏನು ಮಾಡುವುದು? ಲಾಭ ಮಾಡುತ್ತಾರೆ. ಲಾಭಕ್ಕೆ ತಕ್ಕ ಹಾಗೆ ರಿಸ್ಕ್ ಕೂಡ ಇದೆ. 30 ವರ್ಷಕ್ಕೆ ಒಪ್ಪಂದವಾಗಿದೆ. ಮುಂದೇನು ಮಾಡಬೇಕೆಂದು ಸಿಎಂ ಗಮನಕ್ಕೆ ತಂದು ಕ್ರಮ ಕೈಗೊಳ್ಳುತ್ತೇವೆ" ಎಂದರು.

VK ವಿಜಯ ಕರ್ನಾಟಕ

| Date | 09-12-2020 |
|---|---|
| Page No | 7 |

ಗುತ್ತಿಗೆದಾರರಿಂದ ಮನಸೋ ಇಚ್ಛೆ ಶುಲ್ಕ ವಸೂಲಿ | ಮೆಟ್ರೊ ನಿಲ್ದಾಣದಲ್ಲಿ ಪ್ರಯಾಣ ದರಕ್ಕಿಂತ ಪಾರ್ಕಿಂಗ್ ಶುಲ್ಕವೇ ದುಬಾರಿ

# ದುಬಾರಿ ಪಾರ್ಕಿಂಗ್ ಶುಲ್ಕ ವಸೂಲಿ ದಂಧೆಗೆ ಬೀಳದ ಕಡಿವಾಣ

■ ನಾಗಪ್ಪ ನಾಗನಾಯಕನಹಳ್ಳಿ
ಬೆಂಗಳೂರು
nagappa.narayanappa@timesgroup.com

ನಗರದಲ್ಲಿ ಸಂಚಾರ ದಟ್ಟಣೆಯಷ್ಟೇ ಪಾರ್ಕಿಂಗ್ ನದ್ದೂ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದನ್ನೇ ಬಂಡವಾಳವಾಗಿಸಿಕೊಂಡಿರುವ ಮಾಲ್‌ಗಳು, ಖಾಸಗಿ ಸಂಸ್ಥೆಗಳು ದುಬಾರಿ ಪಾರ್ಕಿಂಗ್ ಶುಲ್ಕ ವಸೂಲಿ ಮಾಡುತ್ತಿದ್ದು, ಸವಾರರ ಜೇಬಿಗೆ ಕತ್ತರಿ ಹಾಕುತ್ತಿವೆ. ಸರಕಾರಿ ಸಂಸ್ಥೆಗಳೂ ಇದಕ್ಕೆ ಹೊರತಾಗಿಲ್ಲ.

ಸಾರ್ವಜನಿಕರ ಅನುಕೂಲಕ್ಕಾಗಿ ಬಿಬಿಎಂಪಿ, ಸರಕಾರಿ ಇಲಾಖೆಗಳು ಹಾಗೂ ಖಾಸಗಿ ಸಂಸ್ಥೆಗಳು ಶುಲ್ಕ ಪಾವತಿಸಿ ವಾಹನ ನಿಲುಗಡೆಗೆ ಅನುವು ಮಾಡಿಕೊಟ್ಟಿವೆ. ಆದರೆ, ಗುತ್ತಿಗೆದಾರರು ಸವಾರರಿಂದ ಅಧಿಕ ಶುಲ್ಕ ವಸೂಲಿ ಮಾಡಿ ವಂಚಿಸುತ್ತಿರುವ ಆರೋಪಗಳು ಕೇಳಿ ಬಂದಿವೆ. ಇಷ್ಟಾದರೂ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಹೀಗಾಗಿ, ದುಬಾರಿ ಶುಲ್ಕ ವಸೂಲಿ ದಂಧೆ ಮುಂದುವರಿದಿದೆ.

ಸಾಂದರ್ಭಿಕ ಚಿತ್ರ




### ಮೆಟ್ರೊ ನಿಲ್ದಾಣಗಳಲ್ಲಿ ಪಾರ್ಕಿಂಗ್ ಶುಲ್ಕದ ವಿವರ

| ವಾಹನದ ವಿಧ | ಮೊದಲ 4 ತಾಸು | ಆನಂತರದ ಪ್ರತಿ ಗಂಟೆಗೆ | ಬೆಳಗ್ಗೆ 7 ರಿಂದ ರಾತ್ರಿ 10 ಗಂಟೆವರೆಗೆ |
|---|---|---|---|
| ದ್ವಿಚಕ್ರ ವಾಹನಗಳು | 15 | 5 | 30 |
| ಕಾರುಗಳು | 30 | 10 | 60 |

### ಬಿಎಂಟಿಸಿ ನಿಲ್ದಾಣಗಳಲ್ಲಿನ ಶುಲ್ಕ

| ವಾಹನದ ವಿಧ | 0-2 ಗಂಟೆ | 2-4 ಗಂಟೆ | 4-8 ಗಂಟೆ | 8-24 ಗಂಟೆ |
|---|---|---|---|---|
| ದ್ವಿಚಕ್ರ ವಾಹನಗಳು | 5 | 10 | 20 | 25 |
| ಕಾರುಗಳು | 12 | 20 | 30 | 60 |

## ಕೆಲವೆಡೆ ಗುತ್ತಿಗೆ ಅವಧಿ ಮುಗಿದರೂ ಶುಲ್ಕ ಸಂಗ್ರಹ

## ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ

## ದುಬಾರಿ ದರದ ಕಾರಣ ರಸ್ತೆಯಲ್ಲೇ ಪಾರ್ಕಿಂಗ್

ಬಿಬಿಎಂಪಿಯ ಕೆ.ಆರ್.ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆಯ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ರಾಜಾಜಿನಗರದ ವಾಣಿಜ್ಯ ಸಂಕೀರ್ಣ, ಯಶವಂತಪುರ ವಾಣಿಜ್ಯ ಸಮುಚ್ಚಯದಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ಸೌಲಭ್ಯವಿದೆ. ಇದಲ್ಲದೆ, ಜೆ.ಸಿ.ರಸ್ತೆ ಮತ್ತು ಕೆ.ಜಿ.ರಸ್ತೆಯ ಕೆಂಪೇಗೌಡ ಮಹಾರಾಜ ಕಾಂಪ್ಲೆಕ್ಸ್ ಬಹುಮಹಡಿ ಕಟ್ಟಡಗಳಲ್ಲೂ ವಾಹನ ನಿಲುಗಡೆಗೆ ಸವಲತ್ತು ಕಲ್ಪಿಸಲಾಗಿದೆ. ಆದರೆ, ಟೆಂಡರ್ ಪಡೆದವರು ನಿಯಮವನ್ನು ಗಾಳಿಗೆ ತೂರಿ ದುಬಾರಿ ಶುಲ್ಕ ಸಂಗ್ರಹಿಸುತ್ತಿದ್ದು, ಜನರಿಗೆ ಆರ್ಥಿಕ ಹೊರೆ ಬೀಳುತ್ತಿದೆ. ಕೆ.ಆರ್.ಮಾರುಕಟ್ಟೆಯಲ್ಲಿ ಪಾರ್ಕಿಂಗ್ ನಿರ್ವಹಣೆಯ ಗುತ್ತಿಗೆ ಅವಧಿ ಮುಗಿದಿದ್ದು, ಜನವರಿಯಿಂದ ಪಾಲಿಕೆಯೇ ಶುಲ್ಕ ಸಂಗ್ರಹ ಮಾಡುತ್ತಿದೆ.

**ಗುತ್ತಿಗೆ ಸಂಸ್ಥೆಗಳಿಂದ ಹಗಲು ದರೋಡೆ:** ಕೆ.ಆರ್.ಮಾರುಕಟ್ಟೆಯಲ್ಲಿ ಎಷ್ಟೇ ಅವಧಿವರೆಗೆ ನಿಲುಗಡೆ ಮಾಡಿದರೂ ದ್ವಿಚಕ್ರ ವಾಹನಗಳಿಗೆ 10 ರೂ., ಕಾರು, ಇತರೆ ವಾಹನಗಳಿಗೆ 2 ಗಂಟೆಯವರೆಗೆ 20 ರೂ., ಆನಂತರ ಪ್ರತಿ ಒಂದು ತಾಸಿಗೆ ಹೆಚ್ಚುವರಿಯಾಗಿ 10 ರೂ. ಮತ್ತು ದಿನಕ್ಕೆ 100 ರೂ. ಶುಲ್ಕ ಸಂಗ್ರಹಿಸಲಾಗುತ್ತಿದ್ದು, ನಿತ್ಯ 20 ರಿಂದ 22 ಸಾವಿರ ರೂ. ಆದಾಯ ಬರುತ್ತಿದೆ. ಕೆಂಪೇಗೌಡ ಮಹಾರಾಜ ಕಾಂಪ್ಲೆಕ್ಸ್ ಅನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, ಟೆಂಡರ್ ಪಡೆದ ಸಂಸ್ಥೆಯು ಮೂರು ತಿಂಗಳಿಗೊಮ್ಮೆ 12 ಲಕ್ಷ ರೂ. ಪಾರ್ಕಿಂಗ್ ಶುಲ್ಕವನ್ನು ಪಾಲಿಕೆಗೆ ಭರಿಸುತ್ತಿದೆ.

ಪಾಲಿಕೆ ಒಡೆತನದ ಪೇ ಆ್ಯಂಡ್ ಪಾರ್ಕ್ ವ್ಯವಸ್ಥೆಯ ಗುತ್ತಿಗೆದಾರರ ಪೈಕಿ ಕೆಲವರು ನಿಯಮ ಮೀರಿ ಹಲವು ಪಟ್ಟು ಅಧಿಕ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಜೆ.ಸಿ.ರಸ್ತೆಯ ಬಹುಮಹಡಿ ಪಾರ್ಕಿಂಗ್ ಕಟ್ಟಡದಲ್ಲಿ ಟೆಂಡರ್ ನಿಯಮದಂತೆ ದ್ವಿಚಕ್ರ ವಾಹನಗಳಿಗೆ 5 ರೂ. ಮತ್ತು ಕಾರುಗಳಿಗೆ 10 ರೂ. ನಿಗದಿಪಡಿಸಲಾಗಿದೆ. ಆದರೆ, ಗುತ್ತಿಗೆದಾರರು ಕ್ರಮವಾಗಿ 10 ರೂ. ಮತ್ತು 20 ರೂ. ಸಂಗ್ರಹಿಸುತ್ತಿದ್ದಾರೆ. ಉಳಿದ ಕಟ್ಟಡಗಳಲ್ಲೂ ಇದೇ ರೀತಿಯ ಶುಲ್ಕ ಸಂಗ್ರಹಿಸಿ, ಹಗಲು ದರೋಡೆ ಮಾಡಲಾಗುತ್ತಿದೆ.

**ದುಬಾರಿ ಶುಲ್ಕ ವಸೂಲಿಗಿಲ್ಲ ಕಡಿವಾಣ:** ಕಂದಾಯ ಭವನ, ವಿಶ್ವೇಶ್ವರಯ್ಯ ಟವರ್, ಕೃಷಿ ಭವನ, ನ್ಯಾಯಾಲಯದ ಆವರಣಗಳಲ್ಲೂ ಶುಲ್ಕ ಪಾವತಿಸಿ ವಾಹನ ನಿಲುಗಡೆಗೆ ಅವಕಾಶ ಮಾಡಿಕೊಡಲಾಗಿದೆ. ಇಲ್ಲಿ ಟೆಂಡರ್ ಪಡೆದವರು ಮನಸೋ-ಇಚ್ಛೆ ಪಾರ್ಕಿಂಗ್ ಶುಲ್ಕ ಸಂಗ್ರಹಿಸುತ್ತಿರುವ ದೂರುಗಳಿವೆ.

»08

VK ವಿಜಯ ಕರ್ನಾಟಕ

| Date | 09-12-2020 |
| --- | --- |
| Page No | 8 |


### ಚರ್ಚ್‌ಸ್ಟ್ರೀಟ್‌ನಲ್ಲಿ ಅನುಷ್ಠಾನವಾದ ಯೋಜನೆಗೆ ಉತ್ತಮ ಪ್ರತಿಕ್ರಿಯೆ

# ಶುದ್ಧ ಗಾಳಿ ರಸ್ತೆ ವಿಸ್ತರಣೆಗೆ ಸಿದ್ಧತೆ

**ವಿಕ ಸುದ್ದಿಲೋಕ** ಬೆಂಗಳೂರು

ನಗರದ ಚರ್ಚ್ ಸ್ಟ್ರೀಟ್‌ನಲ್ಲಿ 'ಶುದ್ಧ ಗಾಳಿ ರಸ್ತೆ' ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ನಗರದ ಇತರ ಏಳು ಪ್ರಮುಖ ರಸ್ತೆಗಳಿಗೂ ಈ ಯೋಜನೆ ವಿಸ್ತರಿಸಲು ನಗರ ಮತ್ತು ಭೂಸಾರಿಗೆ ನಿರ್ದೇಶನಾಲಯ(ಡಲ್ಟ್) ಯೋಜನೆ ರೂಪಿಸಿದೆ.

ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ)ಯ ಸಹಯೋಗದಲ್ಲಿ ಡಲ್ಟ್ ಪಾದಚಾರಿ ಸ್ನೇಹಿಯಾದ 'ಶುದ್ಧ ಗಾಳಿ ರಸ್ತೆ' ಯೋಜನೆಯನ್ನು ಚರ್ಚ್‌ಸ್ಟ್ರೀಟ್‌ನಲ್ಲಿ ಪ್ರಾಯೋಗಿಕವಾಗಿ ನ.7ರಿಂದ ಆರಂಭಿಸಿದ್ದು, ಫೆಬ್ರವರಿವರೆಗೂ ಮುಂದುವರಿಯಲಿದೆ. ವಾರಾಂತ್ಯದಲ್ಲಿ ಈ ರಸ್ತೆಯಲ್ಲಿ ಯಾವುದೇ ವಾಹನಗಳಿಗೆ ಅವಕಾಶವಿರುವುದಿಲ್ಲ, ಕಳೆದ ನಾಲ್ಕು ವಾರಾಂತ್ಯದಲ್ಲಿನ ಈ ಕ್ರಮಕ್ಕೆ ಪಾದಚಾರಿಗಳು ಮತ್ತು ಸ್ಥಳೀಯ ವ್ಯಾಪಾರಿಗಳು ಮುಕ್ತ ಕಂಠದಿಂದ ಹರ್ಷ ವ್ಯಕ್ತಪಡಿಸಿದ್ದಾರೆ.

"ಟ್ರಾಫಿಕ್ ಮತ್ತು ವಾಯು ಮಾಲಿನ್ಯದ ಕಿರಿಕಿರಿ ಇಲ್ಲದೇ ನಾಗರಿಕರು ಚರ್ಚ್‌ಸ್ಟ್ರೀಟ್ ಸುತ್ತಲು ಸಹಕಾರಿಯಾಗಿದೆ. ಇದೀಗ ಮೊದಲಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ವ್ಯಾಪಾರವೂ ಚೆನ್ನಾಗಿ ನಡೆಯುತ್ತಿದೆ. ಆದರೆ ಡೆಲಿವರಿ ಹುಡುಗರು ಬರಲು ಮತ್ತು ಅವರ ವಾಹನಗಳನ್ನು ಪಾರ್ಕ್ ಮಾಡಲು ಅವಕಾಶ ಕಲ್ಪಿಸಬೇಕು. ಹೋಟೆಲ್‌ಗಳ ಹೊರಗೆ ಟೇಬಲ್ ಹಾಕಿ ಗ್ರಾಹಕರಿಗೆ ಆಹಾರ ಪೂರೈಸಲಾಗುತ್ತಿದೆ. ಆದರೆ ಇಲ್ಲಿ ಬಿಯರ್ ಕುಡಿಯಲು ಅವಕಾಶ ನೀಡಬಾರದು," ಎಂದು ಚರ್ಚ್ ಸ್ಟ್ರೀಟ್ ನಿವಾಸಿಗಳ ಸಂಘದ ಅಧ್ಯಕ್ಷ ದೀಪಕ್ ಬಟಾವಿಯ ಒತ್ತಾಯಿಸಿದರು.

"ನಾನು ಅನೇಕ ಬಾರಿ ಚರ್ಚ್ ಸ್ಟ್ರೀಟ್‌ಗೆ ಬಂದಿದ್ದೇನೆ. ಆದರೆ ಇದು ನನಗೆ ಹೊಸ ಅನುಭವ. ವಾಹನಗಳ ಕಿರಿಕಿರಿ ಇಲ್ಲದೇ, ವಾಯು ಮಾಲಿನ್ಯ ಇಲ್ಲದೇ, ವಾಹನಗಳ ಕರ್ಕಶ ಶಬ್ದವಿಲ್ಲದೇ ನೆಮ್ಮದಿಯಾಗಿ ರಸ್ತೆಯಲ್ಲಿ ಸಂಚರಿಸಬಹುದು. ವಿದೇಶದಲ್ಲಿ ಇರುವಂತೆ ಭಾಸವಾಗುತ್ತಿದೆ," ಎಂದು ಟೆಕ್ಕಿ ಅಜಯ್ ನುಡಿದರು.

**ಚರ್ಚ್ ಸ್ಟ್ರೀಟ್‌ನಲ್ಲಿ ವ್ಯಾಪಾರ ಹೆಚ್ಚಳ**

**ವಾಹನ ಸಂಚಾರ ಸಂಪೂರ್ಣ ನಿರ್ಬಂಧ**

**ಸ್ಥಳೀಯರು, ಪಾದಚಾರಿಗಳಿಗೆ ಸಂತಸ**



ವಾರಾಂತ್ಯದಲ್ಲಿ ಚರ್ಚ್ ಸ್ಟ್ರೀಟ್‌ಗೆ ಭೇಟಿ ನೀಡಿದ ನಾಗರಿಕರು ಮತ್ತು ಸ್ಥಳೀಯ ವ್ಯಾಪಾರಿಗಳಿಂದ 'ಶುದ್ಧ ಗಾಳಿ ರಸ್ತೆ' ಕ್ರಮದ ಬಗ್ಗೆ ಅತ್ಯುತ್ತಮ ಪ್ರತಿಕ್ರಿಯೆ ಬರುತ್ತಿದೆ. ಮಲ್ಲೇಶ್ವರಂ 8ನೇ ಅಡ್ಡರಸ್ತೆಯ ನಿವಾಸಿಗಳು ಕೂಡ ಇದೇ ರೀತಿಯ ಕ್ರಮವನ್ನು ಜಾರಿಗೆ ತರಬೇಕೆಂದು ಮನವಿ ಮಾಡಿದ್ದಾರೆ.

**- ವಿ.ಮಂಜುಳಾ,** ಡಲ್ಟ್ ಆಯುಕ್ತೆ



## ಪಟ್ಟಿಯಲ್ಲಿ ಗಾಂಧಿ ಬಜಾರ್, ಕಮರ್ಷಿಯಲ್ ಸ್ಟ್ರೀಟ್

ಗಾಂಧಿ ಬಜಾರ್ ಮುಖ್ಯ ರಸ್ತೆ(ಕೆಆರ್ ರಸ್ತೆ-ಡಿವಿಜಿ ರಸ್ತೆ), ಮಲ್ಲೇಶ್ವರಂ 8ನೇ ಅಡ್ಡರಸ್ತೆ(ಮಾರ್ಗೋಸಾ ರಸ್ತೆ ಮತ್ತು 18ನೇ ಸಂಪಿಗೆ ರಸ್ತೆ ನಡುವೆ), ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಪಕ್ಕದ 10ನೇ ಮುಖ್ಯ ರಸ್ತೆ, ರಸ್ಸೆಲ್ ಮಾರ್ಕೆಟ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್(ಕಾಮರಾಜ ರಸ್ತೆ-ಜುಮ್ಮಾ ಮಸೀದಿ ರಸ್ತೆ), ಮಲ್ಲೇಶ್ವರಂ 7ನೇ ಅಡ್ಡರಸ್ತೆಯಿಂದ 10ನೇ ಅಡ್ಡರಸ್ತೆ, ಬ್ರಿಗೇಡ್ ರಸ್ತೆ(ಎಂಜಿ ರಸ್ತೆ-ರೆಸಿಡೆನ್ಸಿ ರಸ್ತೆ)ಗಳಲ್ಲಿ ವಾರಾಂತ್ಯದಲ್ಲಿ 'ಶುದ್ಧ ಗಾಳಿ ರಸ್ತೆ' ಕ್ರಮವನ್ನು ಜಾರಿಗೆ ತರಲು ಡಲ್ಟ್ ಯೋಜಿಸುತ್ತಿದೆ. "ಮುಂದಿನ ಹಂತದಲ್ಲಿ ಗಾಂಧಿ ಬಜಾರ್ ರಸ್ತೆಯಲ್ಲಿ 'ಶುದ್ಧ ಗಾಳಿ ರಸ್ತೆ' ಯೋಜನೆ ಜಾರಿಗೆ ಯೋಜಿಸಲಾಗಿದೆ. ಇತರೆ ರಸ್ತೆಗಳಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳು ನಡೆಯುತ್ತಿದ್ದು, ಇದು ಮಾರ್ಚ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ," ಎಂದು ಡಲ್ಟ್ ಅಧಿಕಾರಿಯೊಬ್ಬರು ತಿಳಿಸಿದರು.

ವಿಜಯ ಕರ್ನಾಟಕ

| Date | 09-12-2020 |
|---|---|
| Page No | 8 |

# ಘನತ್ಯಾಜ್ಯ ನಿರ್ವಹಣೆಗೆ ಸಿಎಂ ಪ್ರತ್ಯೇಕ ಸಭೆ

**ಬೆಂಗಳೂರು:** ಬೆಂಗಳೂರಿನ ಕಸ ಸಮಸ್ಯೆ ನಿವಾರಣೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಪ್ರಯತ್ನ ಮುಂದಿನ ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದ್ದು, ಈ ಬಗ್ಗೆ ಸುದೀರ್ಘ ಚರ್ಚೆ ನಡೆಸುವುದಕ್ಕೆ ಬೆಂಗಳೂರಿನ ಶಾಸಕರ ಜತೆಗೆ ಸಿಎಂ ಯಡಿಯೂರಪ್ಪ ಪ್ರತ್ಯೇಕ ಸಭೆ ನಡೆಸಲು ತೀರ್ಮಾನಿಸಿದ್ದಾರೆ.

**ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಕುರಿತು ಚರ್ಚೆ**

ವಿಧಾನಸಭೆ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಎನ್.ಎ.ಹ್ಯಾರಿಸ್ ಪ್ರಶ್ನೆಗೆ ಉತ್ತರಿಸಿದ ಸಚಿವ ಮಾಧುಸ್ವಾಮಿ, ''ಬೆಂಗಳೂರಲ್ಲಿ ಪ್ರತಿ ನಿತ್ಯ 5,500 ಟನ್ ಕಸ ಸಂಗ್ರಹವಾಗುತ್ತದೆ. ಘನ ತ್ಯಾಜ್ಯ ನಿರ್ವಹಣೆಗೆ ಟೆಂಡರ್ ಕರೆದು, ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಟೆಂಡರ್ ಕರೆಯಲಾಗಿದೆ. 4000 ಟನ್ ಕಸದಿಂದ ಗ್ಯಾಸ್ – ಪವರ್ ಉತ್ಪಾದನೆ ಗುರಿ ಇಟ್ಟುಕೊಂಡಿದ್ದೇವೆ. ಈ ವಿದ್ಯುತ್ತನ್ನು ಕೆಪಿಟಿಸಿಎಲ್ ಖರೀದಿಸಬೇಕು. ಪ್ರತಿ ಯೂನಿಟ್‌ಗೆ 7 ರೂ.ವರೆಗೆ ವೆಚ್ಚವಾಗುವ ನಿರೀಕ್ಷೆ ಇದೆ. ಅಷ್ಟು ಹಣಕ್ಕೆ ಒಪ್ಪಂದ ಆಗದೇ ಇದ್ದರೆ, ಈ ವಿದ್ಯುತ್ತನ್ನು ಗ್ರಿಡ್‌ಗೆ ನೀಡಿ, ಬಿಬಿಎಂಪಿ ತನ್ನ ಪಾಲಿನ ವಿದ್ಯುತ್ತನ್ನು ಅಲ್ಲಿಂದ ಬಳಸಿಕೊಳ್ಳುವ ಬಗ್ಗೆಯೂ ಚಿಂತನೆ ನಡೆಸಲಾಗುತ್ತಿದೆ'' ಎಂದರು.

''ವಿದ್ಯುತ್ ಉತ್ಪಾದನಾ ಘಟಕ ತಕ್ಷಣ ಕಾರ್ಯಾರಂಭ ಮಾಡಲು ಸಾಧ್ಯವಿಲ್ಲ. ಹಂತ- ಹಂತವಾಗಿ ಮಾಡಲಾಗುತ್ತದೆ. ಕನಿಷ್ಠ ಎರಡು ವರ್ಷವಾದರೂ ಬೇಕಾಗುತ್ತದೆ. ಬೆಂಗಳೂರಿನ ಕಸ ಹಾಕಲು ಎಲ್ಲೂ ಜನ ಬಿಡುವುದಿಲ್ಲ. ನನ್ನ ಕ್ಷೇತ್ರದಲ್ಲಿ ನಾನೂ ವಿರೋಧಿಸುತ್ತೇನೆ. ಆದರೆ ಘನತ್ಯಾಜ್ಯ ಸಂಸ್ಕರಣೆಯಿಂದ ವಿದ್ಯುತ್ ಉತ್ಪಾದನೆಯಿಂದ ಈ ಸಮಸ್ಯೆ ನೀಗಿಸಬಹುದು. ಇದಕ್ಕಾಗಿ ಸಿಎಂ ನೇತೃತ್ವದಲ್ಲಿ ಸಭೆ ಕರೆಯಲಾಗುತ್ತದೆ'' ಎಂದು ಹೇಳಿದರು.

VK ವಿಜಯ ಕರ್ನಾಟಕ

| Date | 09-12-2020 |
| --- | --- |
| Page No | 8 |


# 18 ಲಕ್ಷ ತೆರಿಗೆ ಹಣ ವಸೂಲಿಗೆ ಆದೇಶ

**ವಿಕ ಸುದ್ದಿಲೋಕ** ಬೆಂಗಳೂರು

ಕೋವಿಡ್ ಜಾಗೃತಿ ಕುರಿತು ಜಾಹೀರಾತು ಫಲಕ ಅಳವಡಿಕೆ ಸಂಬಂಧ ಖಾಸಗಿ ಕಂಪನಿಗಳಿಂದ ಬಿಬಿಎಂಪಿಗೆ ಬರಬೇಕಿರುವ ಒಟ್ಟು 18 ಲಕ್ಷ ತೆರಿಗೆ ಹಣವನ್ನು ಇನ್ನೊಂದು ವಾರದಲ್ಲಿ ವಸೂಲಿ ಮಾಡಿ ಪಾವತಿಸಬೇಕು ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

**ಕೋವಿಡ್ ಜಾಗೃತಿ ಜಾಹೀರಾತು ಫಲಕ ಅಳವಡಿಕೆ ಹಣ ಬಾಕಿ**

ಇಲ್ಲವಾದರೆ, ಸರಕಾರವೇ ಆ ಮೊತ್ತವನ್ನು ಭರಿಸಬೇಕಾಗುತ್ತದೆ ಎಂದೂ ಸಿಜೆ ಎ.ಎಸ್.ಓಕ್ ನೇತೃತ್ವದ ವಿಭಾಗೀಯ ಪೀಠ ಎಚ್ಚರಿಕೆ ನೀಡಿದೆ.

ಕೋವಿಡ್ ಜಾಗೃತಿ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡುವ ವೇಳೆ ಷರತ್ತುಗಳನ್ನು ಸರಕಾರ ಉಲ್ಲಂಘಿಸಿದೆ ಎಂದು ಆರೋಪಿಸಿ ವಕೀಲ ಜಿ.ಆರ್.ಮೋಹನ್ ಸಲ್ಲಿಸಿದ್ದ ಮಧ್ಯಂತರ ಅರ್ಜಿ ಕುರಿತು ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಕಳೆದ ವಿಚಾರಣೆ ವೇಳೆ, ಖಾಸಗಿ ಜಾಹೀರಾತುಗಳಿದ್ದ ಫಲಕಗಳನ್ನು ಶೀಘ್ರ ತೆರವುಗೊಳಿಸಬೇಕು. ನಗರ ವ್ಯಾಪ್ತಿಯಲ್ಲಿ ಜಾಹೀರಾತು ಫಲಕ ಪ್ರದರ್ಶಿಸಿದ ಸಂಬಂಧ ಪಾಲಿಕೆಗೆ ಸೇರಬೇಕಿದ್ದ ಒಟ್ಟು 18,04,638 ರೂ. ತೆರಿಗೆ ಹಣವನ್ನು ವಸೂಲಿ ಮಾಡಿ ಬಿಬಿಎಂಪಿಗೆ ಪಾವತಿಸುವಂತೆ ಸರಕಾರಕ್ಕೆ ನಿರ್ದೇಶಿಸಿತ್ತು.

ಸರಕಾರ ನ್ಯಾಯಾಲಯದ ಯಾವ ನಿರ್ದೇಶನವನ್ನೂ ಪಾಲಿಸಿಲ್ಲ, ಕೋರ್ಟ್ ಷರತ್ತು ಉಲ್ಲಂಘಿಸಿ ಜಾಹೀರಾತು ಅಳವಡಿಸಲು ಖಾಸಗಿಯವರಿಗೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ಧ ಹಿರಿಯ ಅಧಿಕಾರಿಯಿಂದ ವಿಚಾರಣೆ ನಡೆಸಿಲ್ಲ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸಿಲ್ಲ, ಬಿಬಿಎಂಪಿಗೆ ಖಾಸಗಿ ಕಂಪನಿಗಳಿಗೆ ಬರಬೇಕಿದ್ದ 18 ಲಕ್ಷ ತೆರಿಗೆ ಹಣವನ್ನೂ ವಸೂಲಿ ಮಾಡಿಲ್ಲ ಎಂದು ತರಾಟೆಗೆ ತೆಗೆದುಕೊಂಡಿತು.

VK ವಿಜಯ ಕರ್ನಾಟಕ

| Date | 09-12-2020 |
| --- | --- |
| Page No | 8 |

### ಅಧಿಕಾರಿಗಳು, ವರ್ತಕರ ನಡುವೆ ಮುಗಿಯದ ಸಮರ

# ಎಪಿಎಂಸಿ ಮಾರುಕಟ್ಟೆ ವರ್ತಕರಿಗೆ ನೋಟಿಸ್

■ **ಹನುಮಂತರಾಜು ಬಿ.ಕೆ.**
ಪೀಣ್ಯದಾಸರಹಳ್ಳಿ




ದಾಸನಪುರ ಎಪಿಎಂಸಿ ಮಾರುಕಟ್ಟೆ ಪ್ರಾರಂಭವಾಗಿ ಮೂರು ವರ್ಷಗಳು ಕಳೆದರೂ ವರ್ತಕರು ಹಾಗೂ ಎಪಿಎಂಸಿ ಅಧಿಕಾರಿಗಳ ನಡುವಿನ ಹಗ್ಗ ಜಗ್ಗಾಟ ಇನ್ನೂ ನಿಂತಿಲ್ಲ, ಕಳೆದ ಮೂರು ವರ್ಷಗಳಿಂದ ಹಲವು ವರ್ತಕರು ಮಳಿಗೆಗಳ ಬಾಡಿಗೆ ಕಟ್ಟಿಲ್ಲ, ಈ ಹಿನ್ನೆಲೆಯಲ್ಲಿ ಮಳಿಗೆಗಳನ್ನು ವಶಕ್ಕೆ ಪಡೆಯುವುದಾಗಿ ಎಪಿಎಂಸಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದು, ಇದು ವರ್ತಕರ ಅಸಮಾಧಾನಕ್ಕೆ ಕಾರಣವಾಗಿದೆ. 'ನೀ ಕೊಡೆ ನಾ ಬಿಡೆ' ಎನ್ನುವಂತಾಗಿದೆ ವರ್ತಕರು ಮತ್ತು ಅಧಿಕಾರಿಗಳ ನಡುವಿನ ಸಮರ.

ಯಶವಂತಪುರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಸರಕಾರ ಮೂರು ವರ್ಷಗಳ ಹಿಂದೆ ದಾಸನಪುರದಲ್ಲಿ ನೂತನ ಎಪಿಎಂಸಿ ಮಾರುಕಟ್ಟೆ ಪ್ರಾರಂಭ ಮಾಡಿತು. ಸುಮಾರು 300 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಮಾರುಕಟ್ಟೆ ಪ್ರಾಂಗಣದಲ್ಲಿ 220 ಮಳಿಗೆಗಳಿವೆ.

**ಕೋಟ್ಯಂತರ ರೂ ಬಾಡಿಗೆ ಬಾಕಿ**

2017ರ ಏಪ್ರಿಲ್ ತಿಂಗಳಿನಲ್ಲಿ ಮಳಿಗೆಗಳು ಪ್ರಾರಂಭವಾಗಿದ್ದು, ಅನೇಕ ವರ್ತಕರು ಈವರೆಗೂ ಸರಕಾರಕ್ಕೆ ಸರಿಯಾಗಿ ಬಾಡಿಗೆ ನೀಡದೇ ಕೋಟ್ಯಂತರ ರೂಪಾಯಿ ಬಾಡಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಇನ್ನೂ 7 ದಿನಗಳಲ್ಲಿ ಬಾಡಿಗೆ ಹಣ ಸಂದಾಯ ಮಾಡದೇ ಹೋದಲ್ಲಿ ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಕೃಷಿ ಉತ್ಪನ್ನ ಮಾರಾಟ ಇಲಾಖೆ ನೋಟಿಸ್ ಜಾರಿಗೊಳಿಸಿದೆ.

**ಮೂರು ವರ್ಷ ಕಳೆದರೂ ಸಂಪೂರ್ಣ ವರ್ಗಾವಣೆ ಯಾಗದ ಮಾರುಕಟ್ಟೆ**



ಮಾರುಕಟ್ಟೆಯಲ್ಲಿ ಸೂಕ್ತ ಸೌಲಭ್ಯಗಳಿಲ್ಲದೆ ವರ್ತಕರು ಸೊರಗಿದ್ದಾರೆ. ಕಿರಿದಾದ ರಸ್ತೆ, ಶೌಚಾಲಯ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳನ್ನು ವರ್ತಕರು ಎದುರಿಸುತ್ತಲೇ ಬಂದಿದ್ದಾರೆ. ಮುಖ್ಯವಾಗಿ ಮಾರುಕಟ್ಟೆ ಸಂಪೂರ್ಣವಾಗಿ ಯಶವಂತಪುರದಿಂದ ವರ್ಗವಾಗಿಲ್ಲ, ರೈತರು, ಗ್ರಾಹಕರು ಈಗಲೂ ಯಶವಂತಪುರ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಾಸನಪುರ ಮಾರುಕಟ್ಟೆಗೆ ರೈತರು ತಮ್ಮ ಬೆಳೆಗಳನ್ನು ತರುತ್ತಿಲ್ಲ, ಬೆಳೆಗಳಿಲ್ಲದಿರುವುದರಿಂದ ಗ್ರಾಹಕರು ಮಳಿಗೆಗಳತ್ತ ಸುಳಿಯುತ್ತಿಲ್ಲ, ಇದರಿಂದ ಬಾಡಿಗೆ ಹೇಗೆ ಕಟ್ಟುವುದು ಹೇಗೆ ಎಂದು ವರ್ತಕರು ಅಲವತ್ತುಗೊಂಡಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 09-12-2020 |
|---|---|
| Page No | 2 |

# ತ್ಯಾಜ್ಯ ನಿರ್ವಹಣಾ ಮಂಡಳಿ ರಚನೆ ಬಗ್ಗೆ ಗೌಪ್ಯತೆ ಇರಲಿ

» **ಪಾಲಿಕೆ ಅಧಿಕಾರಿಗಳಿಗೆ ಸರ್ಕಾರದಿಂದ ಸೂಚನೆ**

**ಬೆಂಗಳೂರು:** ಬಿಬಿಎಂಪಿ ತ್ಯಾಜ್ಯ ಕಸ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ರಚನೆ ಪ್ರಸ್ತಾವನೆ ವಿಚಾರದ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳುವಂತೆ ಪಾಲಿಕೆ ಅಧಿಕಾರಿಗಳಿಗೆ ಸರ್ಕಾರ ನಿರ್ದೇಶನ ನೀಡಿದೆ.

ನಗರದಲ್ಲಿ ಹತ್ತಾರು ವರ್ಷಗಳಿಂದ ಪೆಡಂಭೂತವಾಗಿ ಕಾಡುತ್ತಿರುವ ಕಸ ನಿರ್ವಹಣೆ ಹಾಗೂ ಕಸ ವಿಲೇವಾರಿ ಸಮಸ್ಯೆಗೆ ಶಾಶ್ವತ ಮುಕ್ತಿ ಹಾಡಲು ಘನತ್ಯಾಜ್ಯ ನಿರ್ವಹಣಾ ಮಂಡಳಿ ರಚನೆ ಮಾಡಲಾಗುತ್ತಿದೆ. ಈ ಬಗ್ಗೆ ವಾರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಸಾಧ್ಯತೆ ಇದೆ.

**ನಿರ್ವಹಣಾ ಅಧಿಕಾರ ಪಾಲಿಕೆಗೆ:** ಪ್ರತ್ಯೇಕ ಘನತ್ಯಾಜ್ಯ ಮಂಡಳಿ ನಿರ್ಮಾಣಕ್ಕೆ ಪಾಲಿಕೆ ಸದಸ್ಯರಿಂದ ವಿರೋಧ ವ್ಯಕ್ತವಾಗುತ್ತಿತ್ತು. ಇದೀಗ ಪಾಲಿಕೆ ಸದಸ್ಯರು ಅಧಿಕಾರದಲ್ಲಿರದ ಹಿನ್ನೆಲೆಯಲ್ಲಿ ಮಂಡಳಿ ರಚನೆ ಕಾರ್ಯ ಸುಗಮವಾಗಿದೆ. ಚುನಾವಣೆಗೆ ಮುನ್ನವೇ ಮಂಡಳಿ ಅಸ್ತಿತ್ವಕ್ಕೆ ಬರುವ ಸಾಧ್ಯತೆಯಿದೆ. ಆದರೆ, ಈಗಿರುವ ಬೆಸ್ಕಾಂ, ಬಿಡಿಎ ಹಾಗೂ ಜಲಮಂಡಳಿಗಳೊಂದಿಗೆ ಪಾಲಿಕೆ ಸಮನ್ವಯತೆ ಕೊರತೆ ಎದುರಿಸುತ್ತಿದೆ ಎಂಬ ಆರೋಪ ವ್ಯಕ್ತವಾಗಿದೆ. ಹೀಗಾಗಿ, ಕಸದ ಮಂಡಳಿ ರಚನೆಯಾದರೂ ಅಂತಿಮವಾಗಿ ನಿರ್ವಹಣೆ ಅಧಿಕಾರ ಪಾಲಿಕೆಯೇ ಉಳಿಸಿಕೊಳ್ಳಲಿದೆ ಎಂದು ತಿಳಿದುಬಂದಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 09-12-2020 |
|---|---|
| Page No | 3 |

# ನಗರದಲ್ಲಿ ನಿಯಂತ್ರಣದಲ್ಲಿರುವ ವಾಯುಮಾಲಿನ್ಯ

**ಬೆಂಗಳೂರು:** ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕದಲ್ಲಿ (ಎಕ್ಯೂಐ) ವಾಯುಮಾಲಿನ್ಯ ನಿಯಂತ್ರಣದಲ್ಲಿರುವುದು ಕಂಡುಬಂದಿದೆ.

**» ಕೆಎಸ್‌ಪಿಸಿಬಿ ನೀಡಿದ ಮಾಹಿತಿಯಿಂದ ಬಹಿರಂಗ**

ಕೆಎಸ್‌ಪಿಸಿಬಿಯು ನಗರದ 10 ಕಡೆಗಳಲ್ಲಿ ಸ್ಥಾಪಿಸಿರುವ ಮಾಪನ ಕೇಂದ್ರಗಳ ಪೈಕಿ ಹೆಚ್ಚಿನ ಮಾಪನಕೇಂದ್ರಗಳಲ್ಲಿ ನಗರದ ವಾಯು ಗುಣಮಟ್ಟ ಸೂಚ್ಯಂಕ ವರ್ಗವು ಉತ್ತಮವಾಗಿದ್ದು, ಕೆಲವೆಡೆ ತೃಪ್ತಿಕರವಾಗಿದೆ.

ವಾಯುಮಾಲಿನ್ಯ ಎಕ್ಯೂಐ ಉತ್ತಮ (0-50) ವಾಗಿದ್ದರೆ ಆರೋಗ್ಯದ ಮೇಲೆ ಕನಿಷ್ಠ ಪರಿಣಾಮ ಬೀರುತ್ತದೆ. ಸಮಾಧಾನಕರ (51-100) ವಾಗಿದ್ದರೆ ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ ಉಂಟಾಗುವ ಸಾಧ್ಯತೆಗಳಿವೆ. ಸಾಧಾರಣವಿದ್ದರೆ (101-200) ಶ್ವಾಸಕೋಶ, ಹೃದಯ ಸಂಬಂಧಿ ಕಾಯಿಲೆ ಇರುವವರು, ಮಕ್ಕಳು ಮತ್ತು ಹಿರಿಯ ವಯಸ್ಕರಲ್ಲಿ ಉಸಿರಾಟದ ಸಮಸ್ಯೆ ಕಂಡುಬರಬಹುದು. ವಾಯುಮಾಲಿನ್ಯದ ಗುಣಮಟ್ಟ ಕಳಪೆ (201-300) ಹಾಗೂ ಅತಿ ಕಳಪೆಯಾಗಿದ್ದರೆ (301-400) ಈ ಮಾಲಿನ್ಯವನ್ನು ದೀರ್ಘಕಾಲಿಕ ಒಡ್ಡುವಿಕೆಯಿಂದ ಉಸಿರಾಟ, ಶ್ವಾಸಕೋಶದ ಅಸ್ವಸ್ಥತೆ ಕಾಣಿಸಬಹುದು. ತೀವ್ರ (401) ವಾಯು ಮಾಲಿನ್ಯ ಗುಣಮಟ್ಟ ವರ್ಗದಿಂದ ಆರೋಗ್ಯವಂತರಲ್ಲೂ ಉಸಿರಾಟದ ಅಸ್ವಸ್ಥತೆ ಕಾಣಿಸಿಕೊಳ್ಳಬಹುದು ಎಂದು ಕೆಎಸ್‌ಪಿಸಿಬಿಯು ವಾಯುಮಾಲಿನ್ಯದಿಂದ ಉಂಟಾಗ ಬಹುದಾದ ಆರೋಗ್ಯ ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದೆ.

**ಮಂಗಳವಾರ ವಾಯು ಗುಣಮಟ್ಟ ಸೂಚ್ಯಂಕ ವಿವರ**

| ಮಾಪನ ಕೇಂದ್ರಗಳ ಹೆಸರು | ಎಕ್ಯೂಐ | ವರ್ಗ |
|---|---|---|
| ಹೆಬ್ಬಾಳ ಪಶು ವೈದ್ಯಕೀಯ ಕಾಲೇಜು | 45 | ಉತ್ತಮ |
| ಜಯನಗರ 5ನೇ ಬ್ಲಾಕ್ ಶಾಲಿನಿ ಮೈದಾನ | 39 | ಉತ್ತಮ |
| ಕವಿಕಾ ಮೈಸೂರು ರಸ್ತೆ | 62 | ತೃಪ್ತಿಕರ |
| ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಹೊಂಬೇಗೌಡನಗರ, ನಿಮ್ಹಾನ್ಸ್ | 27 | ಉತ್ತಮ |
| ಕೇಂದ್ರ ರೇಷ್ಮೆ ಮಂಡಳಿ, ಎಚ್‌ಎಸ್‌ಆರ್ ಲೇಔಟ್ | 33 | ಉತ್ತಮ |
| ನಗರ ರೈಲ್ವೆ ನಿಲ್ದಾಣ, ಮೆಜೆಸ್ಟಿಕ್ | 59 | ತೃಪ್ತಿಕರ |
| ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕೆಎಸ್‌ಪಿಸಿಬಿ, ಶಿವನಗರ | 39 | ಉತ್ತಮ |
| ಬಿಡಬ್ಲ್ಯುಎಸ್‌ಎಸ್‌ಬಿ, ಕಾಡಬೀಸನಹಳಿ | 34 | ಉತ್ತಮ |
| ಪೀಣ್ಯ | 67 | ತೃಪ್ತಿಕರ |
| ಬಿಟಿಎಂ ಲೇಔಟ್ | 34 | ಉತ್ತಮ |

ವಿಜಯವಾಣಿ
ಕನ್ನಡಿಗರ ಧ್ವನಿ

| Date | 09-12-2020 |
|---|---|
| Page No | 3 |

# ಹೋರ್ಡಿಂಗ್ ಹೆಸರಲ್ಲಿ ಲೂಟಿ

## ಕೃಷ್ಣಬೈರೇಗೌಡ ಆರೋಪ | ಸರ್ಕಾರದಿಂದ ಕ್ರಮ ಕೈಗೊಳ್ಳುವ ಭರವಸೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ ಹೋರ್ಡಿಂಗ್ ಹೆಸರಲ್ಲಿ ನಡೆದಿರುವ ಲೂಟಿಗೆ ಕೊನೆ ಹಾಡಿ ಎಂಬ ಕಾಂಗ್ರೆಸ್‌ನ ಕೃಷ್ಣಬೈರೇಗೌಡರ ಒತ್ತಾಯಕ್ಕೆ ಸರ್ಕಾರ



ಮಣಿದಿದೆ. ಈ ಬಗ್ಗೆ ಚರ್ಚೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದೆ.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆ ವಿಷಯ ಪ್ರಸ್ತಾಪಿಸಿದ ಕೃಷ್ಣಬೈರೇಗೌಡ, ಹೋರ್ಡಿಂಗ್ ಕಂಪನಿಯೊಂದು ಹಣ ಲೂಟಿ ಮಾಡುತ್ತಿದೆ. ಖಾಸಗಿಯವರು ಬೆಳೆಯಲಿ, ನಾಲ್ಕು ಜನರಿಗೆ ಕೆಲಸ ಸಿಗಲಿ. ಆದರೆ ಬಿಡಿಎಗೂ ಆದಾಯ ಬರಬೇಕು. ಹೀಗಾಗಿ ಸರ್ಕಾರ ಗಂಭೀರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಟೆಂಡರ್ ಪ್ರಕಾರ ಹೋರ್ಡಿಂಗ್ ಹಾಕಲು ಅವಕಾಶ ಕೊಡಲಾಗಿದೆ ಎಂದು ದೊಡ್ಡ ಪ್ರಮಾಣದಲ್ಲಿ ಹಣ ಲೂಟಿ ಮಾಡಲು ಅವಕಾಶ ಕೊಟ್ಟರೆ ಹೇಗೆ? ಓವರ್ ಹೆಡ್ ಹೋರ್ಡಿಂಗ್‌ನಲ್ಲಿ ಪ್ರತಿ ತಿಂಗಳಿಗೆ 1 ಲಕ್ಷ ರೂ.ಗಳಿಗೂ ಹೆಚ್ಚು ತೆಗೆದುಕೊಳ್ಳುತ್ತಾರೆ. ಇಲ್ಲಿ ಸಾರ್ವಜನಿಕ ಹಿತಾಸಕ್ತಿ ಪಾಲನೆ ಆಗುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ ಎಂದರು.

ಕಾನೂನು ಸಚಿವ ಮಾಧುಸ್ವಾಮಿ ಮಾತನಾಡಿ, ಗಿಡ ನೆಡುವುದು, ಡಿವೈಡರ್ ಹಾಕುವುದು, ಸ್ಮಾಲ್ ಫಾರೆಸ್ಟ್ ನೋಡಿಕೊಳ್ಳುವುದೆಂದು 2018ರಲ್ಲಿ ಟೆಂಡರ್‌ನಲ್ಲಿ ಆಗಿದೆ. ಹೆಚ್ಚು ಲಾಭ ಖಾಸಗಿಯವರಿಗೆ ಸಿಗುವುದನ್ನು ನಾವು ಒಪ್ಪುತ್ತೇವೆ. ಆದರೆ, ಟೆಂಡರ್ ಆಗಿದೆ. ಏನು ಮಾಡುವುದು? ಲಾಭ ಮಾಡುತ್ತಾರೆ. ಲಾಭಕ್ಕೆ ತಕ್ಕ ಹಾಗೆ ರಿಸ್ಕ್ ಕೂಡ ಇದೆ ಎಂದು ಸಮರ್ಥನೆಗೆ ಮುಂದಾದರು. 30 ವರ್ಷ ಒಪ್ಪಂದವಾಗಿದೆ. ಮುಂದೇನು ಮಾಡಬೇಕೆಂದು ಸಿಎಂ ಗಮನಕ್ಕೆ ತಂದು ಕ್ರಮ ಕೈಗೊಳ್ಳುತ್ತೇವೆ ಎಂದರು. ಹೋರ್ಡಿಂಗ್‌ನಿಂದ ತಿಂಗಳಿಗೆ 2ರಿಂದ ಎರಡೂವರೆ ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ. ಕೋರ್ಟ್‌ನಿಂದ ಆದೇಶ ತಂದಿದ್ದಾರೆ ಎಂದರೆ ಗುತ್ತಿಗೆದಾರರ ಉದ್ದೇಶ ಅರ್ಥವಾಗುತ್ತದೆ. ಇಲ್ಲಿ ಲೂಟಿಗೆ ಅವಕಾಶವಾಗುತ್ತದೆ. ಬಿಡಿಎಗೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗುತ್ತಿದೆ. ಬರುವ ಆದಾಯ ಕಡಿಮೆ ಮಾಡಿಕೊಂಡು ಟೆಂಡರ್, ಕೋರ್ಟ್ ಕಾರಣದಲ್ಲಿ ಆದಾಯ ನಷ್ಟ ಮಾಡಿಕೊಳ್ಳುವುದು ಹೇಗೆ ಎಂದರು. ಇದಕ್ಕೆದನಿಗೂಡಿಸಿದ ಎಸ್.ಆರ್. ವಿಶ್ವನಾಥ್, ಸರ್ಕಾರ ಜಾಹಿರಾತು ಪಾಲಿಸಿ ಮಾಡುವ ಅಗತ್ಯವಿದೆ ಎಂದರು.




# ಘನತ್ಯಾಜ್ಯದಿಂದ ವಿದ್ಯುತ್

**ಬೆಂಗಳೂರು:** ಬೆಂಗಳೂರಿನ ಕಸ ಸಮಸ್ಯೆ ನಿವಾರಣೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಪ್ರಯತ್ನವನ್ನು ಸರ್ಕಾರ ತೆರೆದಿಟ್ಟಿದೆ. ಜತೆಗೆ ಆಗಿರುವ ಅಡೆತಡೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಬೆಂಗಳೂರು ಶಾಸಕರೊಂದಿಗೆ ಸಿಎಂ ನೇತೃತ್ವದಲ್ಲಿ ಸಭೆ ಕರೆಯಲು ನಿರ್ಧರಿಸಿದೆ.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್‌ನ ಎನ್.ಎ. ಹ್ಯಾರೀಸ್ ಪ್ರಶ್ನೆಗೆ ಉತ್ತರಿಸಿದ ಸಚಿವ ಮಾಧುಸ್ವಾಮಿ, ಬೆಂಗಳೂರಲ್ಲಿ ಪ್ರತಿ ನಿತ್ಯ 5,500 ಟನ್ ಕಸ ಸಂಗ್ರಹವಾಗುತ್ತದೆ. ಘನ ತ್ಯಾಜ್ಯ ನಿರ್ವಹಣೆ ಟೆಂಡರ್ ಕರೆದು, ತ್ಯಾಜ್ಯವನ್ನು ಸುಟ್ಟು ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಟೆಂಡರ್ ಕರೆಯಲಾಗಿದೆ. 4 ಸಾವಿರ ಟನ್ ಕಸದಿಂದ ಗ್ಯಾಸ್- ವಿದ್ಯುತ್ ಉತ್ಪಾದನೆ ಗುರಿ ಇಟ್ಟುಕೊಂಡು ಕಾರ್ಯೋನ್ಮುಖರಾಗಿದ್ದೇವೆ. ಹೀಗೆ ಉತ್ಪಾದನೆಯಾಗುವ ವಿದ್ಯುತ್ ಅನ್ನು ಕೆಪಿಟಿಸಿಎಲ್ ಖರೀದಿಸಬೇಕು. ಪ್ರತಿ ಯೂನಿಟ್‌ಗೆ ಏಳು ರೂ.ವರೆಗೆ ವೆಚ್ಚವಾಗುವ ನಿರೀಕ್ಷೆ ಇದೆ.



ಅಷ್ಟು ಹಣಕ್ಕೆ ಒಪ್ಪಂದ ಆಗದಿದ್ದರೆ ಗ್ರಿಡ್‌ಗೆ ನೀಡಿ, ಬಿಬಿಎಂಪಿ ತನ್ನ ಪಾಲಿನ ವಿದ್ಯುತ್ ಅನ್ನು ಗ್ರಿಡ್‌ನಿಂದ ಬಳಸಿಕೊಳ್ಳುವ ಬಗ್ಗೆಯೂ ಚಿಂತನೆ ಇದೆ ಎಂದರು. ವಿದ್ಯುತ್ ಉತ್ಪಾದನಾ ಘಟಕವನ್ನು ಹಂತಹಂತವಾಗಿ ಮಾಡಲಾಗುತ್ತದೆ. ಕನಿಷ್ಠ 2 ವರ್ಷ ಬೇಕಾಗಬಹುದೆಂದು ಮಾಧುಸ್ವಾಮಿ ತಿಳಿಸಿದರು.

ಕಾಂಗ್ರೆಸ್‌ನ ಕೆ.ಜೆ.ಜಾರ್ಜ್ ಮಧ್ಯಪ್ರವೇಶಿಸಿ, 1 ಘಟಕಕ್ಕೆ 350 ಕೋಟಿ ರೂ. ಬಂಡವಾಳ ಬೇಕಾಗುತ್ತದೆ. ಘಟಕ ಆರಂಭದ ನಂತರ ಶೇ.40ಸಬ್ಸಿಡಿಯನ್ನು ಕೇಂದ್ರ ಕೊಡುತ್ತದೆ. ರಾಜ್ಯ ಸರ್ಕಾರ ಮೊದಲೇ ಸಬ್ಸಿಡಿ ಕೊಟ್ಟರೆ ಕೆಲಸ ಆಗುತ್ತದೆ ಎಂದರು.

ಬೆಂಗಳೂರಿನ ಕಸ ಹಾಕಲು ಎಲ್ಲೂ ಜನ ಬಿಡಲ್ಲ. ನನ್ನ ಕ್ಷೇತ್ರದಲ್ಲಿ ನಾನೂ ಬಿಡಲ್ಲ. ಆದರೆ, ತ್ಯಾಜ್ಯ ಸುಟ್ಟು ವಿದ್ಯುತ್ ಉತ್ಪಾದಿಸಬೇಕಿದೆ. ಸಿಎಂ ನೇತೃತ್ವದಲ್ಲಿ ಒಂದು ಸಭೆ ಮಾಡಲು ಕ್ರಮ ಕೈಗೊಳ್ಳುತ್ತೇವೆ ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 09-12-2020 |
|---|---|
| Page No | 3 |

# ಪಶ್ಚಿಮ ವಲಯ ಆಯುಕ್ತ ಚಿದಾನಂದ್ ವರ್ಗಾವಣೆ

**ಬೆಂಗಳೂರು:** ಬಿಬಿಎಂಪಿಯಲ್ಲಿ ಎರವಲು ಸೇವೆ ಆಧಾರದಲ್ಲಿ ಪಶ್ಚಿಮ ವಲಯದ ಜಂಟಿ ಆಯುಕ್ತರಾಗಿದ್ದ ಎನ್. ಚಿದಾನಂದ ಅವರನ್ನು ಮಾತೃ ಇಲಾಖೆಗೆ ವರ್ಗಾವಣೆ ಮಾಡಿ ಬಿಬಿಎಂಪಿಯ ಉಪ ಆಯುಕ್ತರು (ಆಡಳಿತ) ಆದೇಶ ಹೊರಡಿಸಿದ್ದಾರೆ.

ಎರವಲು ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಚಿದಾನಂದ ಅವರನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ಮಾತೃ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಅವರ ಸ್ಥಳಕ್ಕೆ ರಾಜರಾಜೇಶ್ವರಿನಗರದ ಜಂಟಿ ಆಯುಕ್ತ ನಾಗರಾಜುಗೆ ಹೆಚ್ಚುವರಿಯಾಗಿ ಪಶ್ಚಿಮ ವಲಯದ ಜಂಟಿ ಆಯುಕ್ತರ ಜವಾಬ್ದಾರಿ ನೀಡಲಾಗಿದೆ.

» **ವರ್ಗ ಆದೇಶವಾಗಿ 6 ತಿಂಗಳ ನಂತರ ಕುರ್ಚಿ ಬಿಟ್ಟ ಅಧಿಕಾರಿ**

ಮೂಲತಃ ಕೃಷಿ ಇಲಾಖೆ ಉಪ ನಿರ್ದೇಶಕರಾಗಿದ್ದರೂ ಚಿದಾನಂದ್, ತಮ್ಮ ಪ್ರಭಾವ ಬಳಸಿಕೊಂಡು ಕೆಎಎಸ್ ತತ್ಸಮಾನ ಹುದ್ದೆಯಾದ ಜಂಟಿ ಆಯುಕ್ತ ಹುದ್ದೆ ಪಡೆದಿದ್ದರು. ಈಗ ಚಿದಾನಂದ್ ಮೇಲೆ ಅಕ್ರಮ ಡಿಸಿ ಬಿಲ್ ಮಾಡಿರುವುದು ಹಾಗೂ ಕಾಮಗಾರಿ ನಡೆಯದೆ ಬಿಲ್ ನೀಡಿರುವ ಕುರಿತು ಆರೋಪಗಳಿದ್ದು, ತನಿಖೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ವಲಯ ಜಂಟಿ ಆಯುಕ್ತರಾಗಿ ಕಾರ್ಯನಿರ್ವಹಿಸಲು ಭಾರತೀಯ ಆಡಳಿತ ಸೇವೆ (ಐಎಎಸ್) ಪ್ರೊಬೆಷನರಿ, ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಥವಾ ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಮುನ್ಸಿಪಲ್ ಸರ್ವೀಸ್ (ಕೆಎಂಎಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆದರೆ, ಪಾಲಿಕೆಯಲ್ಲಿ ಅರ್ಹತೆ ಇಲ್ಲದಿದ್ದರೂ ಘನತ್ಯಾಜ್ಯ ವಿಭಾಗದ ಸರ್ಫರಾಜ್ ಖಾನ್ (ಸಹಕಾರ ಇಲಾಖೆ), ದಕ್ಷಿಣ ವಲಯ ವೀರಭದ್ರಸ್ವಾಮಿ, ಬೊಮ್ಮನಹಳ್ಳಿ ವಲಯ ಎಂ. ರಾಮಕೃಷ್ಣ (ಕೆಎಸ್ಎಫ್‌ಸಿ) ಜಂಟಿ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ವಿಜಯವಾಣಿ ವರದಿ ಪರಿಣಾಮ

**ಚಿ**ದಾನಂದ್ ಅವರನ್ನು ಸರ್ಕಾರ ಜೂ.8ರಂದು ಕೃಷಿ ಇಲಾಖೆಗೆ ವರ್ಗಾವಣೆ ಮಾಡಿ ಆದೇಶಿಸಿತ್ತು. ಆದರೆ, ಕೋವಿಡ್ ಮತ್ತು ಇತರೆ ನೆಪವೊಡ್ಡಿ ಪಾಲಿಕೆಯಲ್ಲಿಯೇ ಠಿಕಾಣಿ ಹೂಡಿದ್ದರು. ಈ ಬಗ್ಗೆ 'ವಿಜಯವಾಣಿ'ಯಲ್ಲಿ ಡಿ.1ರಂದು 'ವರ್ಗವಾಗಿ 6 ತಿಂಗಳಾದರೂ ಕುರ್ಚಿ ಬಿಡದ ಜಂಟಿ ಆಯುಕ್ತ' ಎಂಬ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ವರದಿ ಪರಿಶೀಲನೆ ಮತ್ತು ಚಿದಾನಂದ್ ಅವರನ್ನು ಮಾತೃ ಇಲಾಖೆಗೆ ಕಳುಹಿಸುವಂತೆ ಸರ್ಕಾರದಿಂದ ಮತ್ತೊಮ್ಮೆ ಪಾಲಿಕೆಗೆ ಆದೇಶ ಬಂದ ಹಿನ್ನೆಲೆಯಲ್ಲಿ ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 09-12-2020 |
|---|---|
| Page No | 5 |

# ಸಾಗರ್ ಆಸ್ಪತ್ರೆಗೆ 1 ಲಕ್ಷ ರೂ. ದಂಡ

**ಬೆಂಗಳೂರು:** ನಗರದಲ್ಲಿ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡದ ಸಾಗರ್ ಆಸ್ಪತ್ರೆಗೆ ಬಿಬಿಎಂಪಿ ಮಾರ್ಷಲ್ ಗಸ್ತುಪಡೆ ಮತ್ತು ಆರೋಗ್ಯಾಧಿಕಾರಿಗಳು 1 ಲಕ್ಷ ರೂ. ದಂಡ ವಿಧಿಸಿದ್ದಾರೆ. ಘನತ್ಯಾಜ್ಯ ನಿರ್ವಹಣೆ ಉಪನಿಯಮ ಕಾಯ್ದೆ ಜಾರಿ ಹಿನ್ನೆಲೆಯಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿರುವ ಬಿಬಿಎಂಪಿ ಮಿಶ್ರಕಸ ನೀಡುವುದು, ಎಲ್ಲೆಂದರಲ್ಲಿ ಕಸ ಎಸೆಯುವ, ಮಲ ಮೂತ್ರ ವಿಸರ್ಜನೆ, ಉಗುಳುವ ಸಾರ್ವಜನಿಕರಿಗೆ ಭಾರಿ ಮೊತ್ತದ ದಂಡ ವಿಧಿಸುತ್ತಿದೆ. ಮಾರ್ಷಲ್‌ಗಳ ಗಸ್ತು ಪಡೆ ರಚಿಸಿ ಎಲ್ಲೆಡೆ ನಿಯೋಜನೆ ಮಾಡಲಾಗಿದೆ.

**» ಕಸದೊಂದಿಗೆ ಬಯೋತ್ಯಾಜ್ಯ ಮಿಶ್ರಣ ಹಿನ್ನೆಲೆ**

ಕುಮಾರಸ್ವಾಮಿ ಲೇಔಟ್‌ನ ಸಾಗರ್ ಆಸ್ಪತ್ರೆಯಲ್ಲಿ ಘನತ್ಯಾಜ್ಯದೊಂದಿಗೆ ಜೈವಿಕತ್ಯಾಜ್ಯ ಮಿಶ್ರಣ ಮಾಡಿ ವಿಲೇವಾರಿ ಮಾಡುತ್ತಿದ್ದುದು ಗಮನಕ್ಕೆ ಬಂದಿದೆ. ಪಾಲಿಕೆ ಆರೋಗ್ಯಾಧಿಕಾರಿಗಳೊಂದಿಗೆ ಆಸ್ಪತ್ರೆ ತಪಾಸಣೆ ವೇಳೆ ಘನತ್ಯಾಜ್ಯ ಮತ್ತು ಜೈವಿಕತ್ಯಾಜ್ಯ ಮಿಶ್ರಣ ಮಾಡಿರುವು ಸಾಬೀತಾಗಿದ್ದು, ದಂಡ ವಿಧಿಸಲಾಗಿದೆ.

ವಿಶ್ವವಾಣಿ

| Date | 09-12-2020 |
| --- | --- |
| Page No | 2 |


### ಪ್ರತಿ ಕಟ್ಟಡದಲ್ಲಿ ಜಾಗ ಮೀಸಲಿಡಬೇಕೆಂಬ ನಿಯಮವಿದ್ದರೂ ಬಹುತೇಕ ಕಟ್ಟಡಗಳಲ್ಲಿ ಪಾರ್ಕಿಂಗ್ ಇಲ್ಲ

# ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಬೀದಿಗೆ ಬಿದ್ದ ವಾಹನಗಳು

**ಬೆಂಗಳೂರು:** ನಗರದ ಪ್ರತಿಯೊಂದು ಕಟ್ಟಡದಲ್ಲಿ ವಾಹನ ನಿಲುಗಡೆಗೆ ಜಾಗ ಮೀಸಲಿಡಬೇಕೆಂಬ ನಿಯಮವಿದ್ದರೂ ಬಹುತೇಕ ಕಟ್ಟಡಗಳಲ್ಲಿ ಪಾರ್ಕಿಂಗ್ ಸೌಲಭ್ಯವೇ ಇಲ್ಲ, ಇದರಿಂದಾಗಿ ವಾಹನಗಳನ್ನು ರಸ್ತೆ ಬದಿಯಲ್ಲೇ ನಿಲ್ಲಿಸುವಂತಾಗಿದೆ.



ನಿಯಮಗಳ ಪ್ರಕಾರ ಪ್ರತಿಯೊಂದು ವಸತಿ ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಪಾರ್ಕಿಂಗ್ ಸೌಲಭ್ಯ ಕಲ್ಪಿಸಬೇಕಾಗಿದ್ದು, ನಗರದಲ್ಲಿ ಅನೇಕ ಕಟ್ಟಡಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯೇ ಇಲ್ಲ. 28 ಲಕ್ಷದಷ್ಟು ವಸತಿ ಪ್ರದೇಶಗಳಲ್ಲಿ ಶೇ.80ರಷ್ಟಕ್ಕೆ ಪಾರ್ಕಿಂಗ್ ವ್ಯವಸ್ಥೆಯೇ ಇಲ್ಲವಾಗಿದೆ. ಈ ಪ್ರದೇಶಗಳಲ್ಲಿ ವಾಹನಗಳು ಫುಟ್ ಪಾತ್ ಮತ್ತು ರಸ್ತೆಯ ಅರ್ಧಭಾಗವನ್ನೇ ಬಳಸಬೇಕಾಗಿದೆ. ಇಕ್ಕಟ್ಟಾದ ರಸ್ತೆಗಳಲ್ಲಿ ವಾಹನ ನಿಲುಗಡೆ ಮಾಡುವುದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿದ್ದು, ಇದರಿಂದ ಪಾದಚಾರಿಗಳಿಗೂ ಓಡಾಟಕ್ಕೆ ಸಮಸ್ಯೆಯಾಗುತ್ತಿದೆ. ಇನ್ನು ಹೊಸದಾಗಿ ಪ್ರಾರಂಭಿಸುತ್ತಿರುವ ಕಟ್ಟಡಗಳಲ್ಲೂ ಪಾರ್ಕಿಂಗ್ ಅಗತ್ಯವಾದ ಜಾಗಗಳನ್ನು ಬಿಡಲಾಗುತ್ತಿಲ್ಲ.

ಪ್ರಸ್ತುತ ನಗರದಲ್ಲಿ ಸ್ಥಳಗಳ ಬೆಲೆಯು ಅಧಿಕವಾಗಿದ್ದು, ದೊರೆಯುವ ಪ್ರದೇಶಗಳಲ್ಲೇ ಕಟ್ಟಡಗಳ ನಿರ್ಮಾಣ ಮಾಡಲಾಗುತ್ತಿದೆ. ಕಟ್ಟಡ ನಿರ್ಮಾಣದ ಸಂದರ್ಭದಲ್ಲೂ ಪಾರ್ಕಿಂಗ್‌ಗೆ ಅಗತ್ಯವಾದ ಜಾಗ ಕಲ್ಪಿಸುತ್ತಿಲ್ಲ, ಇದರಿಂದ ಅನೇಕ ವಾಹನಗಳನ್ನು ಬೀದಿಯಲ್ಲೇ ನಿಲ್ಲಿಸುವಂತಾಗಿದೆ. ಬಾಡಿಗೆ ಮನೆಗಳ ಮುಂದೆಯೂ ಪಾರ್ಕಿಂಗ್‌ಗೆ ಸ್ಥಳಾವಕಾಶವೂ ಇಲ್ಲ, ವಾಹನಗಳನ್ನು ಅಸುರಕ್ಷಿತವಾಗಿ ಪಾದಚಾರಿ ಮಾರ್ಗ ಮತ್ತು ರಸ್ತೆ ಬದಿಯಲ್ಲಿ ನಿಲ್ಲಿಸಲಾಗುತ್ತಿದ್ದು, ಅನೇಕ ವಾಹನಗಳು ಕಳವಾಗುತ್ತಿವೆ.

**ಅನ್ಯ ಉದ್ದೇಶಕ್ಕೆ ಪಾರ್ಕಿಂಗ್ ಜಾಗಗಳ ಬಳಕೆ:** ನಿಯಮದ ಪ್ರಕಾರ ವಾಣಿಜ್ಯ ಕಟ್ಟಡಗಳ ತಳಮಹಡಿಯಲ್ಲಿ ವಾಹನ ನಿಲುಗಡೆಗೆ ಮೀಸಲಿಡಬೇಕಾಗಿದೆ. ಆದರೆ, ಆ ಸ್ಥಳಗಳಲ್ಲೂ ಮಳಿಗೆಗಳು, ಕ್ಯಾಂಟೀನ್, ವರ್ಕ್ ಶಾಪ್‌ಗಳು, ಗುಜರಿ ಅಂಗಡಿಗಳು ತಲೆ ಎತ್ತಿದ್ದು, ಬಹುತೇಕ ಕಟ್ಟಡಗಳಲ್ಲಿ ವಾಹನ ನಿಲುಗಡೆಗೆ ಜಾಗವೇ ದೊರೆಯುತ್ತಿಲ್ಲ.

ಉದಯವಾಣಿ
ಜನಮನದ ಜೀವನಾಡಿ

| Date | 09-12-2020 |
| --- | --- |
| Page No | 2 |



ಉದಯವಾಣಿ
ಜನಮನದ ಜೀವನಾಡಿ

| Date | 09-12-2020 |
| --- | --- |
| Page No | 2 |

# ಬಿಬಿಎಂಪಿ ಜಂಟಿ ಆಯುಕ್ತ ಚಿದಾನಂದ ವರ್ಗಾವಣೆ

**ಬೆಂಗಳೂರು:** ಬಿಬಿಎಂಪಿಯ ಪಶ್ಚಿಮ ವಲಯದ ಜಂಟಿ ಆಯುಕ್ತ ಎನ್. ಚಿದಾನಂದ ಅವರನ್ನು ಮಾತೃ ಇಲಾಖೆಗೆ ವರ್ಗಾವಣೆ ಮಾಡಿ ಬಿಬಿಎಂಪಿಯ ಉಪ ಆಯುಕ್ತ (ಆಡಳಿತ) ಅವರು ಆದೇಶ ಹೊರಡಿಸಿದ್ದಾರೆ. ಎರವಲು ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಎನ್. ಚಿದಾನಂದ ಅವರಿಗೆ ಕೆಲವು ನಿರ್ದಿಷ್ಟ ಷರತ್ತುಗಳಿಗೊಳಪಡಿಸಿ ಮಾತೃ ಇಲಾಖೆಗೆ ವರ್ಗಾವಣೆ ಮಾಡಲಾಗಿದ್ದು, ರಾಜರಾಜೇಶ್ವರಿ ನಗರದ ಜಂಟಿ ಆಯುಕ್ತರಾಗಿರುವ ನಾಗರಾಜು ಅವರಿಗೆ ಹೆಚ್ಚುವರಿಯಾಗಿ ಪಶ್ಚಿಮ ವಲಯದ ಜಂಟಿ ಆಯುಕ್ತರ ಜವಾಬ್ದಾರಿ ನೀಡಿ ಆದೇಶ ಹೊರಡಿಸಲಾಗಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 09-12-2020 |
| --- | --- |
| Page No | 2 |

# ರಾಜಧಾನಿಯಲ್ಲಿ ಎಗ್ಗಿಲ್ಲದೆ ನಡೆದಿದೆ 'ಮ್ಯಾನ್ಯುಯಲ್ ಸ್ಕಾವೆಂಜಿಂಗ್'

• ರಫೀಕ್ ಅಹ್ಮದ್

**ಬೆಂಗಳೂರು:** 'ದೀಪದ ಕೆಳಗೆ ಕತ್ತಲು' ಎಂಬಂತೆ ಇಡೀ ದೇಶದಲ್ಲೆ ಮೊದಲು ಅನಾಗರಿಕ ಹಾಗೂ ಅನಿಷ್ಠ ಮಲಹೊರುವ ಪದ್ಧತಿ ನಿರ್ಮೂಲನೆಗೆ ಕಾಯ್ದೆ ಜಾರಿಗೆ ತಂದ ಹೆಗ್ಗಳಿಕೆ ಹೊಂದಿರುವ ಕರ್ನಾಟಕದಲ್ಲಿ ಈಗಲೂ ಈ ಅನಿಷ್ಠ ಪದ್ಧತಿ ಜಾರಿಯಲ್ಲಿದೆ. ಈ ಅನಿಷ್ಠ ಪದ್ಧತಿಗೆ ಸಿಲುಕಿ ಪ್ರಾಣ ಕಳೆದುಕೊಂಡವರ ಸಂಖ್ಯೆ ರಾಜಧಾನಿ ಬೆಂಗಳೂರಿನಲ್ಲಿ ಹೆಚ್ಚಿದೆ.

'ಮಲ ಹೊರುವ ಪದ್ಧತಿ ಮತ್ತು ಒಣ ಶೌಚಾಲಯಗಳ ನಿರ್ಮೂಲನಾ ಕಾಯ್ದೆಯನ್ನು 1972 ರಲ್ಲಿ ಇದೇ ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತರಲಾಯಿತು. ಕರ್ನಾಟಕ ಮೂಲದ ಬೇಜ್ವಾಡ್ ವಿಲ್ಸನ್‌ನ ಅವರ ಸತತ 32 ವರ್ಷದ ಹೋರಾಟದ ಪರಿಣಾಮವಾಗಿ ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆಯನ್ನು 1993ರಲ್ಲಿ ದೇಶದ ಸಂಸತ್ತು ಅಂಗೀಕರಿಸಿತು.

**2013ರಲ್ಲಿ ಮಲ ಹೊರುವ ಪದ್ಧತಿ ನಿಷೇಧ:** ಈ ಮಧ್ಯೆ ಸಫಾಯಿ ಕರ್ಮಚಾರಿಗಳು ಮತ್ತು ಮಲ ಹೊರುವವರ ಜೀವನ ಮಟ್ಟ ಹಾಗೂ ಕೆಲಸದ ಸ್ಥಿತಿಗತಿಗಳ ಅಧ್ಯಯನ ನಡೆಸಿ ಶಿಫಾರಸು ಮಾಡಲು 1976ರಲ್ಲಿ ನೇಮಕ ಮಾಡಲಾದ ಐ.ಪಿ.ಡಿ ಸಾಲಪ್ಪ ಸಮಿತಿ ಸೇರಿದಂತೆ ವಿವಿಧ ಸಮಿತಿಗಳ ವರದಿ, ಹೈಕೋರ್ಟ್‌ನ ತೀರ್ಪಿನ ಬಳಿಕ 2013ರಲ್ಲಿ ರಾಜ್ಯ ಸರ್ಕಾರ 'ಮಲ ಹೊರುವ ಪದ್ಧತಿ ನಿಷೇಧ (ಮ್ಯಾನ್ಯುಯಲ್ ಸ್ಕಾವೆಂಜಿಂಗ್) ಕಾಯ್ದೆಯನ್ನು ಜಾರಿಗೆ ತಂದಿತು. ಆದರೆ, ಇದೆಲ್ಲದ ಅಣಕವೆಂಬಂತೆ ರಾಜ್ಯದಲ್ಲಿ ಮಲ ಹೊರುವ ಪದ್ಧತಿ ನಿಂತಿಲ್ಲ, ರಾಜಧಾನಿ ಬೆಂಗಳೂರಿನಲ್ಲಂತೂ ಇದು ಎಗ್ಗಿಲ್ಲದೆ ಸಾಗಿದೆ.



**ಯಂತ್ರಗಳಿದ್ದರೂ ಬಳಸದ ಜನತೆ:** ಮಲ ಬಾಚಲು, ಶೌಚ ಗುಂಡಿಗಳನ್ನು ಸ್ವಚ್ಛಗೊಳಿಸಲು ಮನುಷ್ಯರನ್ನು ಬಳಸಿಕೊಳ್ಳುವುದು ನಿಷಿದ್ಧ ಮನುಷ್ಯರ ಬದಲಿಗೆ ಯಂತ್ರಗಳನ್ನು ಬಳಸಿಕೊಳ್ಳಬೇಕು ಎಂದು ಕಾಯ್ದೆ ಹೇಳಿದ್ದರೂ, ಆಧುನಿಕ ತಂತ್ರ ಜ್ಞಾನಗಳ ಬೆಳವಣಿಗೆ ಮತ್ತು ಬಳಕೆಯಲ್ಲಿ ಮುಂಚೂಣಿಯಲ್ಲಿರುವ ರಾಜಧಾನಿ ಬೆಂಗಳೂರಿನಲ್ಲಿ 'ಮ್ಯಾನ್‌ಹೋಲ್', ಒಳಚರಂಡಿಗಳು, ಸೆಪ್ಟಿಕ್ ಟ್ಯಾಂಕ್‌ಗಳು, ತೆರೆದ ಚರಂಡಿಗಳು, ಎಸ್‌ಟಿಪಿಗಳಲ್ಲಿ ಖುದ್ದು ಮನುಷ್ಯರು ಇಳಿದು ಕೆಲಸ ಮಾಡುತ್ತಿದ್ದಾರೆ. ಯಾವುದೇ ಸುರಕ್ಷತಾ ಉಪಕರಣಗಳಿಲ್ಲದೆ ಬರಿಗೈ, ಬರಿಮೈಯಲ್ಲಿ ಮನುಷ್ಯರು ಮತ್ತೊಬ್ಬ ಮನುಷ್ಯರ ಮಲ ಹೊರುತ್ತಿದ್ದಾರೆ.

**ಪರಿಹಾರ ಮರೀಚಿಕೆ: ಶಿಕ್ಷೆ ಪ್ರಮಾಣ ಶೂನ್ಯ:** ಮ್ಯಾನ್‌ಹೋಲ್‌ಗಳಲ್ಲಿ ಇಳಿದು ಕೆಲಸ ಮಾಡುವಾಗ ಸಾವನ್ನಪ್ಪಿದ್ದರೆ ಮೃತರ ಕುಟುಂಬದ ಸದಸ್ಯರಿಗೆ 10 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಸುಪ್ರೀಂಕೋರ್ಟ್ 2018ರಲ್ಲಿ ಹೇಳಿದೆ. ಒಂದಿಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದ್ದರೂ, ಎಲ್ಲ ಮೃತರ ಕುಟುಂಬಗಳಿಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಸಿಕ್ಕಿಲ್ಲ, ಮನುಷ್ಯರನ್ನು ಮಲ ಹೊರುವ ಅಥವಾ ಶೌಚ ಗುಂಡಿ ಸ್ವಚ್ಛಗೊಳಿಸಲು ಬಳಸಿಕೊಂಡವರನ್ನು ಕಾನೂನು ರೀತಿ ಶಿಕ್ಷೆಗೊಳಪಡಿಸಬೇಕು. ಆದರೆ, ಈವರೆಗೆ ಒಬ್ಬರಿಗೂ ಶಿಕ್ಷೆಯಾಗಿಲ್ಲ.

**ಸಮೀಕ್ಷೆಯೇ ನಡೆದಿಲ್ಲ:** 2011ರ ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ ಮಾಹಿತಿ ಪ್ರಕಾರ ರಾಜ್ಯದಲ್ಲಿ 15,375 ಮ್ಯಾನ್ಯುವಲ್ ಸ್ಕಾವೆಂಜರ್ಸ್ ಇದ್ದಾರೆ. ಈ ಪೈಕಿ ಬೆಂಗಳೂರಿನಲ್ಲಿ 300 ಮಂದಿ ಮ್ಯಾನ್ಯುಯಲ್ ಸ್ಕಾವೆಂಜರ್ಸ್ ಇದ್ದಾರೆ ಎಂದು ಹೇಳಲಾಗಿದೆ. ಆದರೆ, ಬೆಂಗಳೂರೊಂದರಲ್ಲೇ 20 ಸಾವಿರ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿದ್ದಾರೆ ಎಂದು ಹೇಳಲಾಗಿದೆ. ಈವರೆಗೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳನ್ನು ಗುರುತಿಸಲು ನಿಖರವಾದ ಸಮೀಕ್ಷೆಯೇ ನಡೆದಿಲ್ಲ, 2018ರಲ್ಲಿ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ ನಡೆಸಿದ ಸಮೀಕ್ಷೆ 1,700 ಮ್ಯಾನ್ಯುಯಲ್ ಸ್ಕಾವೆಂಜರ್‌ಗಳನ್ನು ಗುರುತಿಸಲಾಗಿತ್ತು. ಈ ರೀತಿಯ ಗೊಂದಲಗಳಿಂದಾಗಿ ಕಾಯ್ದೆ ಜಾರಿ, ಪರಿಹಾರ ಮತ್ತಿತರರ ವಿಷಯಗಳಿಗೆ ಸ್ಪಷ್ಟ ರೂಪ ಸಿಗುತ್ತಿಲ್ಲ ಎಂದು ಹೇಳಲಾಗಿದೆ.

## 88 ಸಾವು; ರಾಜಧಾನಿಯಲ್ಲೇ ಹೆಚ್ಚು

ಮ್ಯಾನ್‌ಹೋಲ್, ಶೌಚಗುಂಡಿಗಳಿಗೆ ಇಳಿದು ವಿಷಯುಕ್ತ ಅನಿಲ ಸೇವಿಸಿ ಅಮಾಯಕ ಕಾರ್ಮಿಕರು ಅಮಾನವೀಯವಾಗಿ ಸಾವನ್ನಪ್ಪಿದ ಅನೇಕ ಘಟನೆಗಳು ನಡೆದಿವೆ. 1993ರಿಂದ 2020ರ ಜೂನ್ ವರೆಗೆ ರಾಜ್ಯದಲ್ಲಿ ಇಂತಹ 50ಕ್ಕೂ ಹೆಚ್ಚು ಘಟನೆಗಳು ನಡೆದು 88 ರಿಂದ 90 ಮಂದಿ ಸಾವನ್ನಪ್ಪಿದ್ದು, ಇದರಲ್ಲಿ ಬೆಂಗಳೂರಲ್ಲೇ 60ಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ. ಉಳಿದಂತೆ ಮೈಸೂರು, ಶಿವಮೊಗ್ಗ, ವಿಜಯಪುರ, ಹುಬ್ಬಳ್ಳಿ-ಧಾರವಾಡ, ಚಿಕ್ಕಬಳ್ಳಾಪುರ, ಉತ್ತರ ಕನ್ನಡ, ತುಮಕೂರು, ಹಾಸನ, ದಕ್ಷಿಣ ಕನ್ನಡ ಮತ್ತಿತರರ ಜಿಲ್ಲೆಗಳಲ್ಲಿ ಸಾವುಗಳು ಸಂಭವಿಸಿದೆ.

"ಈಗಷ್ಟೇ ಅಧಿಕಾರವಹಿಸಿ ಕೊಂಡಿದ್ದೇನೆ. ಮಲ ಹೊರುವ ಪದ್ಧತಿ ನಿಷೇಧಿಸಲ್ಪಟ್ಟಿದ್ದರೂ ಬೇರೆ-ಬೇರೆ ರೂಪಗಳಲ್ಲಿ ಅದು ಇನ್ನು ಜಾರಿಯಲ್ಲಿದೆ. ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಸಮೀಕ್ಷೆ ನಡೆಸುವ ಬಗ್ಗೆಯೂ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು".

• **ಎಂ. ಶಿವಣ್ಣ**, ಅಧ್ಯಕ್ಷರು, ರಾಜ್ಯ ಸಫಾಯಿ ಕರ್ಮಚಾರಿ ಆಯೋಗ

ಉದಯವಾಣಿ
ಜನಮನದ ಜೀವನಾಡಿ



| Date | 09-12-2020 |
| --- | --- |
| Page No | 3 |



# ಜಾಹೀರಾತು ಹೋರ್ಡಿಂಗ್ಸ್ ಹಾಕಲು ಹೊಸ ನೀತಿ ಅಗತ್ಯ

- ಹೆಬ್ಬಾಳ ಮೇಲ್ಸೇತುವೆ ಕೆಳಗೆ ಹೋಡಿಂಗ್ಸ್‌ಗಳನ್ನು ಹಾಕಿ ಕೋಟ್ಯಂತರ ರೂ. ಲೂಟಿ
- ಅವಿನಾಶ್ ಆ್ಯಡ್ಸ್ ಖಾಸಗಿ ಸಂಸ್ಥೆಯವರಿಗೆ 30 ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ

ಬೆಂಗಳೂರು: ಬಿಡಿಎ ವ್ಯಾಪ್ತಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜಾಹೀರಾತು ಹೋರ್ಡಿಂಗ್ಸ್‌ಗಳನ್ನು ಹಾಕಲು ಹೊಸ ನೀತಿ ಜಾರಿಗೆ ತರುವ ಅಗತ್ಯವಿದೆ ಎಂದು ಬಿಡಿಎ ಅಧ್ಯಕ್ಷ ಹಾಗೂ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಕೃಷ್ಣ ಬೈರೇಗೌಡ, ಹೆಬ್ಬಾಳ ಮೇಲ್ಸೇತುವೆ ಕೆಳಗಡೆ ಹೋಡಿಂಗ್ಸ್ ಗಳನ್ನು ಹಾಕಿ ಕೋಟ್ಯಂತರ ರೂ.ಲೂಟಿ ಮಾಡುತ್ತಿದ್ದಾರೆ. ಪ್ರತಿ ತಿಂಗಳು 2.5 ಕೋಟಿ ರೂ. ಆದಾಯ ಗಳಿಸುತ್ತಿದ್ದಾರೆ. ಬಿಡಿಎ ಆದಾಯ ಇಲ್ಲದೆ ಭೂಮಿ ಮಾರುತ್ತಿದ್ದಾರೆ. ಇಂತ ಸಂದರ್ಭದಲ್ಲಿ ಯಾವುದೋ ಖಾಸಗಿ ಕಂಪನಿ ಬೇಕಾಬಿಟ್ಟಿ ಜಾಹೀರಾತು ಹಾಕಿಕೊಂಡು ಲೂಟಿ ಮಾಡುತ್ತಿದೆ ಇದನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಅವರ ಪ್ರಶ್ನೆಗೆ ಉತ್ತರಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಅವಿನಾಶ್ ಆ್ಯಡ್ಸ್ ಖಾಸಗಿ ಸಂಸ್ಥೆಯವರಿಗೆ 30 ವರ್ಷಗಳಿಗೆ ಗುತ್ತಿಗೆ ನೀಡಲಾಗಿದ್ದು, ಪ್ರತಿ ವರ್ಷ 1.1 ಕೋಟಿ ರೂ. ಮೊತ್ತ ನಿಗದಿ ಪಡಿಸಲಾಗಿದೆ. ಪ್ರತಿ ವರ್ಷ ಶೇ.5 ರಷ್ಟು ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ. ಅಲ್ಲದೇ ಖಾಸಗಿ ಕಂಪನಿಯವರು ಕೈಗೊಳ್ಳುವ ಕೆಲಸದಲ್ಲಿ ಮಧ್ಯ ಪ್ರವೇಶಿಸಬಾರದು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ ಹೀಗಾಗಿ ಸದ್ಯ ಸರ್ಕಾರ ಏನೂ ಮಾಡಲು ಆಗುವುದಿಲ್ಲ ಎಂದು ಹೇಳಿದರು.

ಅವರ ಉತ್ತರಕ್ಕೆ ಸಮಾಧಾನಗೊಳ್ಳದ ಕೃಷ್ಣಬೈರೇಗೌಡ, ಸರ್ಕಾರ ಖಾಸಗಿಯವರಿಗೆ ಲೂಟಿ ಮಾಡಲು ಅವಕಾಶ ಕೊಟ್ಟು ಅಸಹಾಯಕತೆ ತೋರಿದರೆ ಹೇಗೆ, ಈ ಬಗ್ಗೆ ಕೋರ್ಟ್‌ನಲ್ಲಿ ಹೋರಾಟ ಮಾಡಿ, ಅಲ್ಲಿಯವರೆಗೂ ಅವರ ಕಾಮಗಾರಿಗಳನ್ನು ತಡೆಯುವಂತೆ ಆಗ್ರಹಿಸಿದರು.

ಅವರಿಗೆ ಬೆಂಬಲವಾಗಿ ಮಾತನಾಡಿದ ಬಿಜೆಪಿ ಸದಸ್ಯ ಎಸ್.ಆರ್. ವಿಶ್ವನಾಥ್, ಬೆಂಗಳೂರಿನಲ್ಲಿ ಪಿಪಿಪಿ ಮಾದರಿಯಲ್ಲಿ ಬಸ್ ನಿಲ್ದಾಣ, ಶೌಚಾಲಯ ಹಾಗೂ ಜಾಹೀರಾತು ಹೋರ್ಡಿಂಗ್ಸ್ ಹಾಕಲು ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ. ಇದರಿಂದ ಸಾಕಷ್ಟು ನಷ್ಟ ಉಂಟಾಗುತ್ತಿದೆ. ಈ ಬಗ್ಗೆ ಜಾಹೀರಾತು ನೀತಿ ಜಾರಿಗೆ ತರುವ ಅಗತ್ಯವಿದೆ ಎಂದು ಹೇಳಿದರು.

ಉದಯವಾಣಿ
ಜನಮನದ ಜೀವನಾಡಿ

| Date | 09-12-2020 |
| --- | --- |
| Page No | 5 |

# ಘನತ್ಯಾಜ್ಯ ಸೇವಾ ಶುಲ್ಕ ವಿಧಿಸಲು ಸಕಾಲವೇ ?

## ಜನವರಿಯಿಂದ ಸೇವಾ ಶುಲ್ಕ; ಯಾರಿಗೆ ಎಷ್ಟು? ■ ಗೃಹ ತ್ಯಾಜ್ಯ ಬಳಕೆಗೆ 200 ರೂ. ಮಾಸಿಕ ಸೇವಾ ಶುಲ್ಕ

• ಹಿತೇಶ್ ವೈ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸೇವಾ ಶುಲ್ಕವನ್ನು ಮುಂದಿನ ಜನವರಿಯಿಂದ ವಿಧಿಸಲು ಪಾಲಿಕೆ ತೀರ್ಮಾನಿಸಿದೆ. ಆದರೆ, ಸೇವಾ ಶುಲ್ಕ ವಿಧಿಸುವ ಮುನ್ನ ತ್ಯಾಜ್ಯ ಉತ್ಪಾದಕರ ಸರ್ವೆ ಕಾರ್ಯ ಮಾಡದೆ, ಬೆಸ್ಕಾಂನ ಮಾಹಿತಿಯ ಆಧಾರದ ಮೇಲೆ ಸೇವಾ ಶುಲ್ಕ ವಿಧಿಸಲು ಪಾಲಿಕೆ ಮುಂದಾಗಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ.

'ನಗರದಲ್ಲಿ ಕಸ ಸಂಗ್ರಹ ಹಾಗೂ ವಿಲೇವಾರಿಯಲ್ಲಿ ಬದಲಾವಣೆ ಮಾಡಿಕೊಳ್ಳದೆ, ಯಾವುದೇ ಪೂರ್ವ ತಯಾರಿ ಇಲ್ಲದೆ ಸೇವಾ ಶುಲ್ಕ ಪ್ರಾರಂಭಿಸುವುದು ಪಾಲಿಕೆಗೆ ಮುಳುವಾಗಲಿದೆ' ಎಂದು ಘನತ್ಯಾಜ್ಯ ನಿರ್ವಹಣಾ ತಾಂತ್ರಿಕ ಸಮಿತಿ ಸದಸ್ಯ ಡಾ. ಎಚ್.ಸಿ. ಶರತ್‌ಚಂದ್ರ ಎಚ್ಚರಿಸುತ್ತಾರೆ.

**ಗ್ರಾಹಕರ ವೇದಿಕೆಗೆ ಹೋಗುವ ಸಾಧ್ಯತೆ:** 'ಸೇವಾ ಶುಲ್ಕ ವಿಧಿಸುವುದು ಪ್ರಾರಂಭಿಸಿದ ಮೇಲೆ ಪಾಲಿಕೆ ತನ್ನ ಸೇವೆಯಲ್ಲಿ ವ್ಯತ್ಯಾಸ ಮಾಡುವಂತಿಲ್ಲ. ಈಗಾಗಲೇ ನಗರದಲ್ಲಿ ಪಾಲಿಕೆ ಕಸ ಸಂಗ್ರಹ ಮಾಡುವುದರಲ್ಲಿ ನಿರ್ದಿಷ್ಟ ವ್ಯವಸ್ಥೆ ಅಳವಡಿಸಿಕೊಂಡಿಲ್ಲ. ಸೇವಾ ಶುಲ್ಕ ಪ್ರಾರಂಭಿಸುವ ಮುನ್ನ ವ್ಯವಸ್ಥೆ ಸರಿಪಡಿಸಿಕೊಳ್ಳದೆ ಇದ್ದರೆ ಸಾರ್ವಜನಿಕರು ಗ್ರಾಹಕರ ವೇದಿಕೆಗೆ ಹೋಗುವ ಸಾಧ್ಯತೆಯೂ ಇದೆ' ಎಂದು ಅಭಿಪ್ರಾಯಪಟ್ಟರು.

**ನಿರ್ದಿಷ್ಟ ಬಳಕೆದಾರರಿಗೆ ಅನುಸಾರವಾಗಿ ಸೇವಾ ಶುಲ್ಕ:** ಸೇವಾಶುಲ್ಕ ಪ್ರಾರಂಭ ಮಾಡುವುದಕ್ಕೂ ಮುನ್ನ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಉಪವಿಧಿ –2019ರಲ್ಲಿ ಉಲ್ಲೇಖ ಮಾಡಿರುವಂತೆ ನಗರದಲ್ಲಿನ ಗೃಹ, ವಾಣಿಜ್ಯ ಹಾಗೂ ಸಾಂಸ್ಥಿಕ ತ್ಯಾಜ್ಯ ಉತ್ಪಾದಕರ ವಿವರಗಳನ್ನು ಸಂಗ್ರಹ ಮಾಡಿಕೊಂಡು ನಿರ್ದಿಷ್ಟ ಬಳಕೆದಾರರಿಗೆ ಅನುಸಾರವಾಗಿ ಸೇವಾ ಶುಲ್ಕ ಸಂಗ್ರಹ ಮಾಡಬೇಕು. ಆದರೆ, ಈ ನಿಟ್ಟಿನಲ್ಲಿ ಪಾಲಿಕೆಯಿಂದ ಸರ್ವೆ ಕಾರ್ಯವೇ ಆಗಿಲ್ಲ. ಇದರೊಂದಿಗೆ ಸಾರ್ವಜನಿಕರಿಂದ ಸಂಗ್ರಹವಾಗುವ ಸೇವಾ ಶುಲ್ಕವನ್ನು ಕೇವಲ ಕಸ ನಿರ್ವಹಣೆಗೆ ಮಾತ್ರ ಬಳಸಿಕೊಳ್ಳಬೇಕು ಎನ್ನುವ ಅಂಶಗಳು ಪಾಲಿಕೆಯ ಬೈಲಾದಲ್ಲೇ ಇದೆ. ಸೇವಾ ಶುಲ್ಕದ ಪ್ರತಿ ಪೈಸೆಗೂ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಆದರೆ, ಈ ನಿಟ್ಟಿನಲ್ಲಿ ಪಾಲಿಕೆ ಇನ್ನಷ್ಟೇ ಕಾರ್ಯ ಪ್ರವೃತ್ತವಾಗಬೇಕಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

### ಮೊದಲ ಹಂತದಲ್ಲಿ ಬೆಸ್ಕಾಂ ಮಾಹಿತಿಯೇ ಬಳಕೆ

ಪಾಲಿಕೆ ವ್ಯಾಪ್ತಿಯಲ್ಲಿ ಜನವರಿಯಿಂದ ಬೆಸ್ಕಾಂ ಡೇಟಾ ಆಧಾರದ ಮೇಲೆ ಸೇವಾ ಶುಲ್ಕ ವಿಧಿಸುತ್ತೇವೆ. ಮುಂದಿನ ಮೂರು ತಿಂಗಳಲ್ಲಿ ಕಸ ಉತ್ಪಾದಕರ ಸರ್ವೆ ಮುಗಿಸುತ್ತೇವೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಿ.ರಂದೀಪ್ ತಿಳಿಸಿದರು. ಬೆಸ್ಕಾಂ ಡೇಟಾ ಆಧಾರದ ಮೇಲೆ ಮೊದಲ ಹಂತದಲ್ಲಿ ಸೇವಾ ಶುಲ್ಕ ಸಂಗ್ರಹ ಮಾಡುತ್ತೇವೆ. ಈಗಾಗಲೇ ಗೃಹ ತ್ಯಾಜ್ಯ ಉತ್ಪಾದಕರಿಗೆ 200 ರೂ. ಎಂದು ನಿಗದಿ ಮಾಡಿರುವುದರಿಂದ ಇದರಲ್ಲಿ ಗೊಂದಲ ಇಲ್ಲ. ವಾಣಿಜ್ಯ ತ್ಯಾಜ್ಯ ಉತ್ಪಾದಕ ವರ್ಗೀಕರಣ ಮಾಡಬೇಕಿದೆ. ಮೊದಲ ಹಂತದಲ್ಲಿ ಬೆಸ್ಕಾಂ ಡೇಟಾ ಆಧಾರದ ಮೇಲೆ ನಾಲ್ಕು ಪ್ರಮುಖ ವಾಣಿಜ್ಯ ತ್ಯಾಜ್ಯ ಉತ್ಪಾದಕರ ವರ್ಗೀಕರಣ ಮಾಡಿಕೊಂಡು ಸೇವಾ ಶುಲ್ಕ ಪ್ರಾರಂಭಿಸುತ್ತೇವೆ ಸರ್ವೆ ಮಾಡಿದ ಮೇಲೆ ಶುಲ್ಕ ಮೊತ್ತ ಬದಲಾಯಿಸುತ್ತೇವೆ ಎಂದು 'ಉದಯವಾಣಿ'ಗೆ ಮಾಹಿತಿ ನೀಡಿದರು.

### ಸೇವಾ ಶುಲ್ಕದ ಮೂಲ ಉದ್ದೇಶ ಏನು ?

ನಗರದಲ್ಲಿ ಕಸ ಸಂಗ್ರಹ ಹಾಗೂ ವಿಲೇವಾರಿ ಮಾಡುವುದಕ್ಕೆ ಪಾಲಿಕೆ ಪ್ರತಿ ವರ್ಷ ಅಂದಾಜು ಒಂದು ಸಾವಿರ ಕೋಟಿ ರೂ. ಗಿಂತ ಅಧಿಕ ವಾಗಿ ಖರ್ಚು ಮಾಡುತ್ತಿದೆ. ಆದರೆ, ಇದೇ ಪ್ರಮಾಣದಲ್ಲಿ ಸಾರ್ವಜನಿಕರಿಂದ ಹಣ ಸಂಗ್ರಹವಾಗುತ್ತಿಲ್ಲ. ಕಸ ಸಂಗ್ರಹ ಮಾಡುವ ಗುತ್ತಿಗೆದಾರರಿಗೂ ಕಳೆದ ಎಂಟು ತಿಂಗಳಿನಿಂದ ಪಾಲಿಕೆ ಹಣ ಪಾವತಿ ಮಾಡಿಲ್ಲ. ಅಲ್ಲದೆ, ಕಸ ನಿರ್ವಹಣೆಯ ವಿವಿಧ ಹಂತಗಳ ಸುಧಾರಣೆಗೆ ಸೇವಾ ಶುಲ್ಕ ಅವಶ್ಯ ಎನ್ನುವುದು ಪಾಲಿಕೆಯ ವಾದವಾಗಿದೆ.

**ಕಾಳಜಿ ಇಲ್ಲದ ಬಿಬಿಎಂಪಿ, ಆರೋಪ:** 'ಜನ ಸಂಕಷ್ಟದಲ್ಲಿ ಇರುವ ಸಂದರ್ಭದಲ್ಲಿ ಘನತ್ಯಾಜ್ಯ ಸೇವಾ ಶುಲ್ಕ ಸಂಗ್ರಹ ಮಾಡಲು ಪಾಲಿಕೆ ಮತ್ತು ಸರ್ಕಾರ ಮುಂದಾಗಿರುವುದು ಬಡವರ ಬಗ್ಗೆ ಕಾಳಜಿ ಇಲ್ಲ ಎನ್ನುವುದು ತೋರಿಸುತ್ತದೆ. ಸಾರ್ವಜನಿಕರಿಗೆ ಈ ಸಂದರ್ಭದಲ್ಲಿ ಪಾಲಿಕೆ ಮತ್ತು ಸರ್ಕಾರ ಸಹಾಯಕ್ಕೆ ನಿಲ್ಲಬೇಕು. ಆದರೆ, ಸಾರ್ವಜನಿಕರಿಂದ ಎಷ್ಟು ಹಣ ದೋಚಲು ಸಾಧ್ಯವಿದೆಯೋ ಎಲ್ಲ ಮಾರ್ಗಗಳನ್ನು ಸರ್ಕಾರ ಬಳಸುತ್ತಿದೆ' ಎಂದು ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಅಬ್ದುಲ್ ವಾಜಿದ್ ಆರೋಪಿಸಿದ್ದಾರೆ.

**ಬೆಸ್ಕಾಂಗೆ ಶೇ.5ರಷ್ಟು ಶುಲ್ಕ ಸಾರ್ವಜನಿಕರು ಏಕೆ ನೀಡಬೇಕು?:** ನಗರದಲ್ಲಿ ಸಾರ್ವಜನಿಕರಿಂದ ಘನತ್ಯಾಜ್ಯ ಸೇವಾ ಶುಲ್ಕವನ್ನು ಬೆಸ್ಕಾಂನ ಮೂಲಕ ಸಂಗ್ರಹ ಮಾಡಲು ಪಾಲಿಕೆ ನಿರ್ಧರಿಸಿದೆ. ಈ ಸೇವೆಗಾಗಿ ಬೆಸ್ಕಾಂಗೆ ಶೇ.5ರಷ್ಟು ಸೇವಾ ಶುಲ್ಕ ನೀಡಲು ಪಾಲಿಕೆ ನಿರ್ಧರಿಸಿದೆ. ಈ ವಿಷಯವೂ ಇದೀಗ ಚರ್ಚೆಗೆ ಕಾರಣವಾಗಿದೆ. ಪಾಲಿಕೆಯೆ ಸೇವಾ ಶುಲ್ಕ ಸಂಗ್ರಹ ಮಾಡಿದರೆ ಶೇ.5ರಷ್ಟು ಶುಲ್ಕ ಉಳಿತಾಯವಾಗಲಿದೆ. ಅಲ್ಲದೆ, ಜನ ನೀಡುವ ಸೇವಾ ಶುಲ್ಕವನ್ನು ಅನವಶ್ಯಕವಾಗಿ ಬೆಸ್ಕಾಂಗೆ ನೀಡುವುದು ಎಷ್ಟು ಸರಿ ಎಂಬ ಪ್ರಶ್ನೆ ಉದ್ಭವವಾಗಿದೆ. ಬೆಸ್ಕಾಂ ಬಳಿ ಇರುವ ಮಾಹಿತಿ (ಡಾಟಾ)ಆಧಾರದ ಮೇಲೆ ಸೇವಾ ಶುಲ್ಕ ಸಂಗ್ರಹ ಮಾಡಲು ನಿರ್ಧರಿಸಿದ್ದು, ಇದು ಸಹ ಗೊಂದಲಕ್ಕೆ ಕಾರಣವಾಗುವ ಸಾಧ್ಯತೆ ಇದೆ.

- 'ಸೇವಾ ಶುಲ್ಕ ವಿಧಿಸುವುದು ಪ್ರಾರಂಭಿಸಿದ ಮೇಲೆ ಪಾಲಿಕೆ ತನ್ನ ಸೇವೆಯಲ್ಲಿ ವ್ಯತ್ಯಾಸ ಮಾಡುವಂತಿಲ್ಲ
- ಕಸ ಸಂಗ್ರಹ ಹಾಗೂ ವಿಲೇವಾರಿಯಲ್ಲಿ ಬದಲಾವಣೆ ಮಾಡಿಕೊಳ್ಳದೆ, ಪೂರ್ವ ತಯಾರಿ ಇಲ್ಲದೆ ಶುಲ್ಕ ಪ್ರಾರಂಭಿಸುವುದು ಪಾಲಿಕೆಗೆ ಮುಳುವಾಗಲಿದೆ

### ಬಿಬಿಎಂಪಿ ಬೈಲಾದಲ್ಲಿ ಏನಿದೆ ?

ಬೃಹತ್ ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ

| ವರ್ಗ | ಶುಲ್ಕ |
| --- | --- |
| ಗೃಹ ತ್ಯಾಜ್ಯ ಉತ್ಪಾದಕರು | 200 ರೂ. |
| ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರು (ಪ್ರತಿದಿನ) | |
| 5ಕೆ.ಜಿ ಅಥವಾ 5ಕ್ಕಿಂತ ಕಡಿಮೆ | 500ರೂ. |
| 10ಕೆ.ಜಿ ಅಥವಾ 10ಕ್ಕಿಂತ ಕಡಿಮೆ | 1,400ರೂ. |
| 25ಕೆ.ಜಿ ಅಥವಾ 25ಕ್ಕಿಂತ ಕಡಿಮೆ | 3,500ರೂ. |
| 50 ಕೆ.ಜಿ ಅಥವಾ 50ಕ್ಕಿಂತ ಕಡಿಮೆ | 7 ಸಾವಿರ |
| 100 ಕೆ.ಜಿ ಅಥವಾ 100ಕ್ಕಿಂತ ಕಡಿಮೆ | 14, ಸಾವಿರ |
| ಖಾಲಿ ನಿವೇಶನ | 0.20 ರೂ. (ಚ.ಅ). |
| ಕಟ್ಟಡ ನಿರ್ಮಾಣ ತ್ಯಾಜ್ಯ | ಸಮಯಾನುಸಾರ ನಿರ್ಧಾರ |

ಉದಯವಾಣಿ
ಜನಮನದ ಜೀವನಾಡಿ

| Date | 09-12-2020 |
|---|---|
| Page No | 5 |

# 2 ವರ್ಷದಲ್ಲಿ ಕಸ ಸಮಸ್ಯೆಗೆ ಪರಿಹಾರ

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗಿದ್ದು ಮುಂದಿನ ಎರಡು ವರ್ಷದಲ್ಲಿ ಕಸದ ಸಮಸ್ಯೆಗೆ ಮುಕ್ತಿ ನೀಡಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದ್ದಾರೆ.



ವಿಧಾನಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಎನ್.ಎ.ಹ್ಯಾರಿಸ್ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರವಾಗಿ ಉತ್ತರಿಸಿದ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ, ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಗೆ ಕೆಪಿಸಿಎಲ್ ವತಿಯಿಂದ 600 ಮೆಟ್ರಿಕ್ ಟನ್ ಸಾಮರ್ಥ್ಯದ ಉಪಯೋಗಿಸಿ 11.50 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆಯು 260 ಕೋಟಿ ರೂ.ಗೆ ಅನುಮೋದನೆಗೊಂಡಿದೆ.

**24 ತಿಂಗಳಲ್ಲಿ ಪೂರ್ಣ:** ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸತಾರಂ ಎಂಟರ್‌ಪ್ರೈಸಸ್ ಪ್ರೈ ಲಿ. ಸಂಸ್ಥೆ ವತಿಯಿಂದ ಪ್ರತಿ ದಿನ 1 ಸಾವಿರ ಮೆಟ್ರಿಕ್ ಟನ್ ಮಿಶ್ರ ಘನ ತ್ಯಾಜ್ಯವನ್ನು ಉಪಯೋಗಿಸಿ 12 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಕನ್ನಳ್ಳಿ ಘಟಕದಲ್ಲಿ ಸ್ಥಾಪಿಸಲು ಸರ್ಕಾರ ಅನುಮೋದನೆ ನೀಡಿದೆ. ಈ ಯೋಜನೆಯನ್ನು 24 ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

**8 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಅನುಮೋದನೆ:** ಪಿಪಿಪಿ ಮಾದರಿಯಲ್ಲಿ ಬಿಬಿಎಂಪಿ ವತಿಯಿಂದ ಇಂಡಿಯಂ ಸಂಸ್ಥೆಯಿಂದ 300 ಮೆಟ್ರಿಕ್ ಟನ್ ಘನತ್ಯಾಜ್ಯ ಉಪಯೋಗಿಸಿ 4 ಮೆಗಾ ವ್ಯಾಟ್, ಫರ್ಮಗ್ರೀನ್ ಸಂಸ್ಥೆಯಿಂದ 1 ಸಾವಿರ ಮೆಟ್ರಿಕ್ ಟನ್ ಉಪಯೋಗಿಸಿ ನೈಸರ್ಗಿಕ ಗ್ಯಾಸ್ ಉತ್ಪಾದನೆ ಮಾಡಲು ಅನುಮತಿ ನೀಡಲಾಗಿದೆ. ಅದೇ ರೀತಿ ಮಾರೇನಹಳ್ಳಿ ಸ್ಥಳದಲ್ಲಿ 600 ಮೆಟ್ರಿಕ್ ಟನ್ ಘನತ್ಯಾಜ್ಯ ಬಳಸಿ ವಿದ್ಯುತ್ ಉತ್ಪಾದನೆಗೆ ನೆಕ್ಸಸ್ ನೋವಸ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಎನ್ಇಜಿ ಸಂಸ್ಥೆಯಿಂದ ಮಾವಳ್ಳಿಪುರ ಘಟಕದಲ್ಲಿ 500 ಮೆಟ್ರಿಕ್ ಟನ್ ಘನತ್ಯಾಜ್ಯ ಉಪಯೋಗಿಸಿ 8 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಸರ್ಕಾರ ಅನುಮೋದನೆ ನೀಡಿದೆ ಎಂದು ಹೇಳಿದರು.

**ಬಂಡವಾಳ ಹೂಡಲು ಹಿಂದೇಟು:** ಸರ್ಕಾರದ ಉತ್ತರಕ್ಕೆ ಮಧ್ಯಪ್ರವೇಶಿಸಿ ಮಾತನಾಡಿದ ಕಾಂಗ್ರೆಸ್ ಸದಸ್ಯ ಕೆ.ಜೆ. ಜಾರ್ಜ್, ಬೆಂಗಳೂರಿನಲ್ಲಿ ಮಂಡೂರ್ ಘಟನೆಯಾದ ಮೇಲೆ ಯಾವುದೇ ಹಳ್ಳಿಯಲ್ಲಿ ಕಸ ವಿಲೇವಾರಿ ಮಾಡಲು ಜನರು ಬಿಡುತ್ತಿಲ್ಲ. ರಾಜ್ಯ ಸರ್ಕಾರ ಖಾಸಗಿ ಕಂಪನಿಯವರಿಗೆ ವಿದ್ಯುತ್ ಉತ್ಪಾದನೆ ಮಾಡಲು ಒಪ್ಪಿಗೆ ನೀಡಿದ್ದರೂ, ಒಂದು ಪ್ಲಾಂಟ್ ಹಾಕಲು 350 ಕೋಟಿ ರೂ. ವೆಚ್ಚವಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರ ಶೇಕಡಾ 40 ರಷ್ಟು ಸಬ್ಸಿಡಿ ನೀಡುತ್ತದೆ. ಆದರೆ, ಸಂಸ್ಥೆಯವರು ಪ್ಲಾಂಟ್ ಹಾಕಿದ ನಂತರ ಸಬ್ಸಿಡಿ ನೀಡುವುದರಿಂದ ಯಾವುದೇ ಸಂಸ್ಥೆಯವರು ಮುಂಚಿತವಾಗಿಯೇ ಅಷ್ಟೊಂದು ದೊಡ್ಡ ಮೊತ್ತದ ಹಣ ಬಂಡವಾಳ ಹೂಡಲು ಹಿಂದೇಟು ಹಾಕುತ್ತಾರೆ. ಹೀಗಾಗಿ ಸರ್ಕಾರ ಅವರಿಗೆ ಮುಂಚಿತವಾಗಿಯೇ ಸಬ್ಸಿಡಿ ಹಣ ದೊರೆಯುವಂತೆ ನೋಡಿಕೊಂಡರೆ ಈ ಯೋಜನೆ ಯಶಸ್ವಿಯಾಗುತ್ತದೆ ಎಂದರು.

ಅವರ ಸಲಹೆಯನ್ನು ಸರ್ಕಾರ ಪರಿಗಣಿಸಬಹುದು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಈ ವಿಷಯದಲ್ಲಿ ಸರ್ಕಾರಕ್ಕೆ ಯಾವುದೇ ಪ್ರತಿಷ್ಠೆಯಿಲ್ಲ. ಅವರ ಸಲಹೆಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಹೇಳಿದರು.

ಸಂಯುಕ್ತ ಕರ್ನಾಟಕ

| Date | 09-12-2020 |
| --- | --- |
| Page No | 3 |

# 638 ಮಂದಿಗೆ ಕೊರೊನಾ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ 638 ಮಂದಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಈ ಮೂಲಕ ರಾಜಧಾನಿಯಲ್ಲಿ ಸೋಂಕಿತರ ಸಂಖ್ಯೆ 3,75,163ಕ್ಕೆ ಏರಿಕೆಯಾಗಿದೆ. ನಗರದಲ್ಲಿ ಮಂಗಳವಾರ 7 ಜನರು ಕೊರೊನಾಗೆ ಬಲಿಯಾಗಿದ್ದಾರೆ. ಇದುವರೆಗೆ ಸೋಂಕಿನಿಂದ ಬಲಿಯಾದವರ ಸಂಖ್ಯೆ 4,197ಕ್ಕೆ ಏರಿಕೆಯಾಗಿದೆ. ಇದರ ನಡುವೆ 432 ಸೋಂಕಿತರು ಸೇರಿದಂತೆ ಇದುವರೆಗೆ 3,51,497 ಜನರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಇತ್ತ ರಾಜ್ಯದಲ್ಲಿ ಹೊಸದಾಗಿ 1,280 ಜನರಿಗೆ ಕೊರೊನಾ ದೃಢಪಟ್ಟಿದೆ. ಸೋಂಕಿತರ ಸಂಖ್ಯೆ 8,95,284ಕ್ಕೆ ಏರಿಕೆಯಾಗಿದೆ. ಇವರಲ್ಲಿ 1060 ಸೇರಿದಂತೆ ಇದುವರೆಗೆ 8,58,370 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ರಾಜ್ಯದಲ್ಲಿ 25,015 ಸಕ್ರಿಯ ಸೋಂಕಿತರಿದ್ದಾರೆ. ಬೆಂಗಳೂರಿನ ಏಳು ಮಂದಿ ಸೇರಿದಂತೆ 13 ಜನರು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದು ಈ ಮೂಲಕ ರಾಜ್ಯದಲ್ಲಿ ಕೊರೊನಾ ಸೋಂಕಿನಿಂದ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದವರ ಸಂಖ್ಯೆ 11,880ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಂಯುಕ್ತ ಕರ್ನಾಟಕ

| Date | 09-12-2020 |
|---|---|
| Page No | 4 |

### ಹೊಸದಾಗಿ ಡಾಂಬರೀಕರಣಕ್ಕೆ ಕ್ರಮ । ಮತ್ತೆ ಬಾಯಿ ತೆರೆದ ರಸ್ತೆಗಳು

# ಮಳೆಯಿಂದ ರಸ್ತೆಗಳೆಲ್ಲಾ ಗುಂಡಿಮಯ



**ಸಂ.ಕ.ಸಮಾಚಾರ ಬೆಂಗಳೂರು**

ಕಳೆದ ಒಂದು ವಾರದಿಂದ ನಗರದಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಬಹುತೇಕ ರಸ್ತೆಗಳು ಗುಂಡಿಗಳಾಗಿ ಪರಿವರ್ತನೆಯಾಗಿ ವಾಹನ ಸವಾರರಿಗೆ ಯಮನ ರಹದಾರಿಯಾಗಿ ಮಾರ್ಪಟ್ಟಿವೆ.

ನವೆಂಬರ್ ತಿಂಗಳ ಅಂತ್ಯದೊಳಗೆ ನಗರದಲ್ಲಿನ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಲಾಗುವುದು ಎಂದು ಬಿಬಿಎಂಪಿ ತಿಳಿಸಿತ್ತು. ಆದರೆ, ಇದರಲ್ಲಿ ಅಲ್ಪ ಪ್ರಮಾಣದಲ್ಲಿ ಯಶ ಕಂಡಿತ್ತು. ಈಗ ಎಲ್ಲೆಲ್ಲಿ ಗುಂಡಿಗಳನ್ನು ಮುಚ್ಚಲಾಗಿತ್ತೋ ಅದು ಮತ್ತೆ ಬಾಯ್ದೆರೆದಿದ್ದು ವಾಹನ ಸವಾರರಿಗೆ ಮಾರಕವಾಗಿ ಪರಿಣಮಿಸುತ್ತಿವೆ.

ಬಂಗಾಳ ಕೊಲ್ಲಿಯಲ್ಲಿ ಉಂಟಾದ ನಿವಾರ್ ಚಂಡಮಾರುತದ ಪರಿಣಾಮ ಬೆಂಗಳೂರಿನಲ್ಲಿ ಎರಡು ದಿನ ಜಿಟಿ ಜಿಟಿ ಮಳೆ ಬಿದ್ದ ಹಿನ್ನೆಲೆಯಲ್ಲಿ ರಸ್ತೆಗೆ ಹಾಕಲಾಗಿದ್ದ ತೇಪೆಯೆಲ್ಲ ಮತ್ತೆ ಕಿತ್ತುಬಂದಿದೆ. ಇದರಿಂದ ಬಹುತೇಕ ರಸ್ತೆಗಳು ಗುಂಡಿಮಯವಾಗಿದ್ದು ದ್ವಿಚಕ್ರವಾಹನ ಸವಾರರಿಗೆ ಯಮಪುರಿಗೆ ದಾರಿ ತೋರಿಸುವಂತೆ ಕಾಣಿಸುತ್ತಿವೆ.

- ವಾಹನ ಸವಾರರಿಗೆ ಕಷ್ಟ..ಕಷ್ಟ
- ಮಳೆಗೆ ಕೈಕೊಡುವ ಬೀದಿ ದೀಪಗಳು
- ರಾತ್ರಿ ವೇಳೆ ಗೋಚರಿಸದ ಗುಂಡಿಗಳು

ಹಗಲು ಹೊತ್ತಿನಲ್ಲಿ ಹೇಗೋ ಸಂಭಾಳಿಸಿಕೊಂಡು ವಾಹನಗಳನ್ನು ಚಲಾಯಿಸಬಹುದಾಗಿದೆ ಆದರೆ, ರಾತ್ರಿ ವೇಳೆಯಲ್ಲಿ ರಸ್ತೆ ಗುಂಡಿಗಳು ಗೋಚರಿಸದೆ ವಾಹನ ಸವಾರರು ಕೆಲವು ಸಂದರ್ಭದಲ್ಲಿ ಬಿದ್ದು ಗಾಯಗೊಳ್ಳುತ್ತಿದ್ದಾರೆ. ಇದಕ್ಕೆ ಮತ್ತೊಂದು ಕಾರಣ ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವುದೇ ಕಾರಣ.

ರಸ್ತೆ ಗುಂಡಿಗಳು ನಗರದ ಪ್ರಮುಖ ರಸ್ತೆಗಳಲ್ಲೇ ಬಿದ್ದಿವೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ. ರಾತ್ರಿ ವೇಳೆ ಬೇಗ ಮನೆಗೆ ತೆರಳುವವರು ದ್ವಿಚಕ್ರದಲ್ಲಿ ತೆರಳುವ ಸಂದರ್ಭದಲ್ಲಿ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು ಗೊತ್ತಾಗುತ್ತಿಲ್ಲ.

ವೇಗವಾಗಿ ಬಂದು ರಸ್ತೆ ಗುಂಡಿ ಕಂಡಾಗ ಬ್ರೇಕ್ ಹಾಕಿದ ಸಂದರ್ಭದಲ್ಲಿ ಹಿಂದಿನಿಂದ ಬಂದ ವಾಹನಗಳು ಡಿಕ್ಕಿ ಹೊಡೆಯುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಸಣ್ಣ ಪುಟ್ಟ ಗಾಯಗಳಾಗುವುದರಿಂದ ಈ ಬಗ್ಗೆ ದೂರುಗಳೂ ದಾಖಲಾಗುತ್ತಿಲ್ಲ.

ಈ ವಿಷಯವಾಗಿ ಬಿಬಿಎಂಪಿ ಅಧಿಕಾರಿಗಳನ್ನು ಪ್ರಶ್ನೆ ಮಾಡಿದಲ್ಲಿ ಮಳೆಯಿಂದಾಗಿ ರಸ್ತೆ ಗುಂಡಿಗಳು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಮಳೆಯಿಂದಾಗಿ ವಿಳಂಬವಾಗಿದೆ. ಮಳೆ ಪೂರ್ಣವಾಗಿ ನಿಂತಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುವುದು. ಸಾಧ್ಯವಾದಲ್ಲಿ ಹೊಸದಾಗಿ ಡಾಂಬರೀಕರಣ ಮಾಡಲಾಗುವುದು ಎಂದು ತಿಳಿಸುತ್ತಿದ್ದಾರೆ.

ಸಂಯುಕ್ತ ಕರ್ನಾಟಕ

| Date | 09-12-2020 |
| --- | --- |
| Page No | 4 |

# ಕಸ ನಿರ್ವಹಣೆ ಮಂಡಳಿ ವಾರದೊಳಗೆ ಪ್ರಸ್ತಾವನೆ

**ಸಂ.ಕ.ಸಮಾಚಾರ ಬೆಂಗಳೂರು**

ಕಸ ನಿರ್ವಹಣೆಗಾಗಿ ಪ್ರತ್ಯೇಕ ಮಂಡಳಿ ರಚಿಸಲು ನಿರ್ಧರಿಸಿರುವ ಬಿಬಿಎಂಪಿ ಇನ್ನೊಂದು ವಾರದೊಳಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದು ಮಂಡಳಿಯ ಕಾರ್ಯವೈಖರಿ ಏನೆಂಬುದರ ಕುರಿತು ಬಹಿರಂಗವಾಗಿ ಹೇಳಿಕೆಗಳು ನೀಡದಂತೆ ಅಧಿಕಾರಿಗಳಿಗೆ ತಾಕೀತು ಮಾಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ಮಾಡುವುದಕ್ಕೆ ಪ್ರತ್ಯೇಕ ಮಂಡಳಿ ರಚನೆ ಪ್ರಸ್ತಾವನೆಯ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳುವಂತೆ ಪಾಲಿಕೆಯ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ ಎಂದು ಗೊತ್ತಾಗಿದೆ.

ನಗರದಲ್ಲಿ ಕಸ ನಿರ್ವಹಣೆ ಹಾಗೂ ಕಸ ವಿಲೇವಾರಿಗೆ ಪ್ರತ್ಯೇಕ ಮಂಡಳಿ ರಚನೆ ಮಾಡುವ ಪ್ರಸ್ತಾವನೆ ಸಿದ್ಧವಾಗುತ್ತಿದ್ದು, ಈ ವಾರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಸಾಧ್ಯತೆ ಇದೆ. ಈ ಮಧ್ಯೆ ಮಂಡಳಿ ರಚನೆಯ ಪ್ರಸ್ತಾವನೆ ಹಾಗೂ ಇದರಲ್ಲಿನ ಅಂಶಗಳ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಗೊತ್ತಾಗಿದೆ.

ಕಳೆದ ಒಂದು ವರ್ಷದಿಂದ ಪ್ರತ್ಯೇಕ ಕಸ ಮಂಡಳಿ ರಚನೆ ಮಾಡುವ ಬಗ್ಗೆ ತೆರೆಮರೆಯ ಚರ್ಚೆಗಳು ನಡೆಯುತ್ತಲೇ ಇವೆ. ಖುದ್ದು ಸರ್ಕಾರ ಹಾಗೂ ನಗರಾಭಿವೃದ್ಧಿ ಇಲಾಖೆಯ ಮಟ್ಟದಲ್ಲೇ ಚರ್ಚೆಗಳು ನಡೆಯುತ್ತಿವೆ. ಆದರೆ, ಉದ್ದೇಶಿತ ಮಂಡಳಿಯ ರಚನೆಗೆ ಒಂದು ನಿರ್ದಿಷ್ಟ ರೂಪ ಸಿಕ್ಕಿರಲಿಲ್ಲ. ಇದೀಗ ಪಾಲಿಕೆ ಸದಸ್ಯರೂ ಸಹ ಇಲ್ಲದೆ ಇರುವುದರಿಂದ ಈ ಪ್ರಸ್ತಾವನೆ ಚುರುಕು ಪಡೆದುಕೊಂಡಿದೆ. ಪಾಲಿಕೆಯ ಸದಸ್ಯರು ಇದ್ದಿದ್ದರೆ, ಮಂಡಳಿ ರಚನೆ ಪ್ರಸ್ತಾವನೆಗೆ ಖಚಿತವಾಗಿ ವಿರೋಧ ವ್ಯಕ್ತವಾಗುತ್ತಿತ್ತು. ಇದೀಗ ಪಾಲಿಕೆ ಸದಸ್ಯರ ಅಧಿಕಾರಾವಧಿ ಇಲ್ಲದೆ ಇರುವುದರಿಂದ ಮಂಡಳಿ ರಚನೆ ಮಾಡುವ ಮಾರ್ಗ ಸುಗಮವಾದಂತಿದ್ದು ಚುನಾವಣೆಗೆ ಮುನ್ನವೇ ಮಂಡಳಿ ಅಸ್ತಿತ್ವಕ್ಕೆ ಬರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ನಗರದ ಕಸ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ರಚನೆ ಆಗಲಿದೆಯಾದರೂ, ಇದರ ಜವಾಬ್ದಾರಿ ಪಾಲಿಕೆಗೇ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಜಲಮಂಡಳಿ, ಬೆಸ್ಕಾಂ ಹಾಗೂ ಬಿಡಿಎ ಸೇರಿದಂತೆ ವಿವಿಧ ಮಂಡಳಿಗಳೊಂದಿಗೆ ಪಾಲಿಕೆ ಸಮನ್ವಯತೆ ಕೊರತೆ ಎದುರಿಸುತ್ತಿದೆ ಎಂಬ ಆರೋಪ ವ್ಯಕ್ತವಾಗಿದೆ. ಇದೀಗ ಮತ್ತೊಂದು ಮಂಡಳಿ ರಚನೆಯಾದರೆ, ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆಯೂ ಇದೆ ಎನ್ನುವ ಬಗ್ಗೆಯೂ ಚರ್ಚೆ ನಡೆದಿದೆ. ಹೀಗಾಗಿ, ಕಸ ಸಂಗ್ರಹ ಹಾಗೂ ವಿಲೇವಾರಿಗೆ ಪ್ರತ್ಯೇಕ ಮಂಡಳಿ ರಚನೆಯಾದರೂ, ಅದರ ಒಟ್ಟಾರೆ ಜವಾಬ್ದಾರಿಯನ್ನು ಪಾಲಿಕೆಯಲ್ಲೇ ಉಳಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಗೊತ್ತಾಗಿದೆ.

> **“ ಶುಲ್ಕ ವಸೂಲಿ**
>
> ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಮುನ್ನವೇ ಬೆಸ್ಕಾಂ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ವಿದ್ಯುತ್ ಬಿಲ್ ನೀಡುವ ಸಂದರ್ಭದಲ್ಲಿ ಕಸದ ಬಿಲ್ ಎಂದು ಪ್ರತಿ ಮನೆಗೆ 200 ರೂ. ಸೇರಿಸಲು ಸೂಚಿಸಲಾಗುತ್ತದೆ. ವಿದ್ಯುತ್ ಬಿಲ್ ಜೊತೆ ಪ್ರತಿ ಮನೆಯಿಂದ ಬಂದ 200 ರೂ. ಗಳನ್ನು ಬಿಬಿಎಂಪಿ ಖಾತೆಗೆ ಜಮೆ ಮಾಡುವ ಬಗ್ಗೆ ಸಮಾಲೋಚನೆ ಮಾಡಲಾಗುತ್ತದೆ.
>
> ■ **ಮಂಜುನಾಥಪ್ರಸಾದ್** | ಪಾಲಿಕೆ ಆಯುಕ್ತ

# ನಾಮಫಲಕಗಳಲ್ಲಿ ಶುದ್ಧ ಕನ್ನಡ ಬಳಕೆಗೆ ತಾಕೀತು

**ಸಂ.ಕ.ಸಮಾಚಾರ ಬೆಂಗಳೂರು**



ಬಹುಭಾಷಾ ಸಾಮರಸ್ಯ ಹಾಳು ಮಾಡದೆ, ಕನ್ನಡ ಕಾಯಕ ವರ್ಷಾಚರಣೆಯ ಸಂಬಂಧ ಅಷ್ಟ ಕಾರ್ಯಸೂಚಿಗಳನ್ನು ಕಾರ್ಯಗತಗೊಳಿಸಲು ಶ್ರಮಿಸಬೇಕೆಂದು ಕನ್ನಡ ಕಾಯಕ ಪಡೆಯ ಪದಾಧಿಕಾರಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸಲಹೆ ನೀಡಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ನಡೆದ ಬೆಂಗಳೂರು ನಗರ ಜಿಲ್ಲೆ, ಬಿಬಿಎಂಪಿ ಮತ್ತು ಬೆಂಗಳೂರು ವಿಧಾನಸಭಾಕ್ಷೇತ್ರದ ಕನ್ನಡ ಜಾಗೃತಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಇಂದು ಕರ್ನಾಟಕದ ವಿವಿಧೆಡೆ ನಾಮಫಲಕಗಳಲ್ಲಿ ಕನ್ನಡವನ್ನು ತಪ್ಪು ತಪ್ಪಾಗಿ ಬಳಕೆ ಮಾಡಲಾಗುತ್ತಿದೆ. ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿರುವ ನಾಮಫಲಕಗಳಲ್ಲಿ ಅರ್ಥರಹಿತವಾದ ಕನ್ನಡ ಪದಗಳನ್ನು ಬಳಕೆ ಮಾಡಲಾಗುತ್ತಿರುವುದನ್ನು ಗಮನಿಸಿದ್ದೇವೆ. ಹಾಗಾಗಿ ನಾಮಫಲಕಗಳಲ್ಲಿ ಶುದ್ಧ ಕನ್ನಡವನ್ನು ಬಳಕೆ ಮಾಡುವ ನಿಟ್ಟಿನಲ್ಲಿ ಸರ್ಕಾರಿ ಕಚೇರಿಗಳು, ಖಾಸಗಿ ಸಂಸ್ಥೆಗಳು ಹಾಗೂ ಅಂಗಡಿ-ಮುಂಗಟ್ಟುಗಳ ಮಾಲೀಕರು, ಮುಖ್ಯಸ್ಥರಿಗೆ ಜಾಗೃತಿ ಮೂಡಿಸುವ ಕೆಲಸಗಳು ನಿರಂತರವಾಗಿ ಆಗಬೇಕಿದೆ ಎಂದರು.

ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಯಾವ ರೀತಿಯ ಕೆಲಸಗಳು ಆಗಬೇಕಿದೆ ಎಂಬುದನ್ನು ಪಟ್ಟಿಮಾಡಿಕೊಂಡು. ಅದೆಲ್ಲವನ್ನು ಮಾಡುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಿಕೊಂಡು, ಕನ್ನಡ ಕಟ್ಟುವಿಕೆಯಲ್ಲಿ ಬಹುಭಾಷಾ ಸಾಮರಸ್ಯ ಹಾಳು ಮಾಡದಂತೆ ಎಚ್ಚರಿಕೆಯಿಂದ, ಪ್ರಾಧಿಕಾರದ ಸಹಕಾರದೊಂದಿಗೆ ಅವಿರತವಾಗಿ ಶ್ರಮಿಸಬೇಕು. ರಾಜ್ಯದ ಎಲ್ಲ ಜಿಲ್ಲೆಯ ಸದಸ್ಯರನ್ನು ಸಂಘಟಿಸಿ ಅವರೊಂದಿಗೆ ಬೃಹತ್ ಕಾರ್ಯಕ್ರಮ ಮಾಡಬೇಕೆಂಬ ನಮ್ಮ ಆಸೆಗೆ ಕೊರೊಟಿಂ ಅಡ್ಡಿಯಾದ ಕಾರಣ, ಹಂತ ಹಂತವಾಗಿ ಎಲ್ಲರೊಂದಿಗೂ ಸಭೆಯನ್ನು ನಡೆಸಲಾಗುವುದು ಎಂದು ಹೇಳಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳೀಧರ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ ಮತ್ತಿತರರಿದ್ದರು.

> **“** ರಸ್ತೆ, ಬಡಾವಣೆ, ನಾಮಫಲಕಗಳಲ್ಲಿ ಕನ್ನಡವನ್ನು ತಪ್ಪಾಗಿ ಬರೆದಿದ್ದರೆ, ಅದನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಶುದ್ಧ ಕನ್ನಡವನ್ನು ಬಳಸುವಂತೆ ಅವರಿಗೆ ಮನವರಿಕೆ ಮಾಡಿಕೊಡಿ, ಬ್ಯಾಂಕ್, ರೈಲ್ವೆ, ಅಂಚೆ ಕಚೇರಿ, ಆದಾಯ ತೆರಿಗೆ, ವಿಮಾ ಸಂಸ್ಥೆ ಮುಂತಾದ ಕಡೆಗಳಲ್ಲಿ ಕನ್ನಡದಲ್ಲಿಯೇ ಅರ್ಜಿ ನಮೂನೆಗಳನ್ನು ಬಳಸಿ, ಇತರರಿಗೂ ಈ ಬಗ್ಗೆ ಸಲಹೆ ನೀಡುವ ಮೂಲಕ ಜಾಗೃತಿ ಮೂಡಿಸಬೇಕು.
>
> ■ **ಟಿ.ಎಸ್.ನಾಗಾಭರಣ** | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಹೊಸ ದಿಗಂತ

| Date | 09-12-2020 |
| --- | --- |
| Page No | 12 |

ಹೊಸ ದಿಗಂತ

12

09 Dec 2020

# 2 ವರ್ಷದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ

**ವಿಧಾನಸಭೆ:** ಮುಂದಿನ 2 ವರ್ಷದೊಳಗೆ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳು ಕಾರ್ಯಾರಂಭ ಮಾಡಲಿವೆ ಎಂದು ಕಾನೂನು ಸಚಿವ ಮಾಧುಸ್ವಾಮಿ ಭರವಸೆ ನೀಡಿದರು.

ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರಿನಲ್ಲಿ ಗೃಹಬಳಕೆಯಿಂದ 4.5 ಸಾವಿರ ಟನ್ ಹಾಗೂ ವಾಣಿಜ್ಯ ಬಳಕೆಯಿಂದ 5 ಸಾವಿರ ಟನ್‌ವರೆಗೂ ಪ್ರತಿದಿನ ತ್ಯಾಜ್ಯ ಸಂಗ್ರಹಣೆಯಾಗುತ್ತಿದೆ. ಇವುಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಕಸದಿಂದ ವಿದ್ಯುತ್ ಉತ್ಪಾದಿಸಲು 6 ಕಂಪನಿಗಳು ಮುಂದೆ ಬಂದಿವೆ ಎಂದರು.

ಈ ಎಲ್ಲ ಪ್ರಕ್ರಿಯೆಗಳು ನಡೆಯಲು ಸಾಕಷ್ಟು ಕಾಲಾವಕಾಶ ಬೇಕಿದೆ. ಸಾಲದ್ದಕ್ಕೆ ಜನರ ಸಹಕಾರವೂ ಬೇಕಿದೆ. ಹೀಗಾಗಿ ತಡವಾಗುತ್ತಿದೆ. ಪ್ರಸ್ತುತ 2 ಘಟಕಗಳು ಕಾರ್ಯಾಚರಂಭಿಸಬಹುದು. ಉಳಿದ ಘಟಕಗಳು ಮುಂದಿನ 2 ವರ್ಷದೊಳಗೆ ಕೆಲಸ ಶುರು ಮಾಡಲಿವೆ ಎಂದರು.

ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ 7 ಸಂಸ್ಕರಣಾ ಘಟಕಗಳು, 1121 ಟನ್ ಘನತ್ಯಾಜ್ಯ ಸಂಸ್ಕರಣೆ ಮಾಡುತ್ತಿವೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕನ್ನಲ್ಲಿ ಬಳಿ 1 ಸಾವಿರ ಮೆಟ್ರಿಕ್ ಟನ್ ಕಸದಿಂದ 12 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಸತಾರಮ್ ಎಂಟರ್‌ಪ್ರೈಸಸ್ ಸಂಸ್ಥೆ ಮುಂದೆ ಬಂದಿದ್ದು, ದೊಡ್ಡಬಿದರಕಲ್ಲಿನ ಸಮೀಪ 300 ಟನ್ ಕಸದಿಂದ 4 ಮೆಗಾವ್ಯಾಟ್ ವಿದ್ಯುತ್



ಉತ್ಪಾದಿಸಲು ಇಂಡಿಯನ್ ಸಂಸ್ಥೆ ತಯಾರಿದೆ. ಇದಲ್ಲದೆ ಮಾವಳ್ಳಿಪುರದಲ್ಲಿ 1 ಸಾವಿರ ಟನ್ ಕಸದಿಂದ ಕಾಂಪೋಸ್ ಗೊಬ್ಬರ ತಯಾರಿಸಲು ಫರ್ಮ್ ಗ್ರೀನ್ ಸಂ ಸಿದ್ಧವಿದೆ. ಈ ಎಲ್ಲ ಘಟಕಗಳು ಒಂದು ವರ್ಷದೊಳ ಕಾರ್ಯಾರಂಭಿಸಬಹುದು ಎಂದು ಹೇಳಿದರು.

ಇನ್ನು ಮಾರೇನಹಳ್ಳಿ ಹತ್ತಿರ 600 ಟನ ಘನತ್ಯಾಜ್ಯವನ್ನು ವೈಜ್ಞಾನಿಕ ರೀತಿಯಿಂದ ವಿಲೇವಾ ಮಾಡಲು ಮೆಕ್ಸಸ್ ನೋವಸ್ ಸಂಸ್ಥೆ ಮುಂದೆ ಬಂದಿದ್ದು ಮಾವಳ್ಳಿಪುರ ಘಟಕದಲ್ಲಿ 500 ಟನ್ ತ್ಯಾಜ್ಯದಿಂದ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಎನ್‌ಇಜಿ ಸಂ ಪ್ರಸ್ತಾವನೆ ಸಲ್ಲಿಸಿದೆ ಎಂದು ಮಾಹಿತಿ ನೀಡಿದರು.

ಹೊಸ ದಿಗಂತ

| Date | 09-12-2020 |
| --- | --- |
| Page No | 12 |

# ತ್ಯಾಜ್ಯ ವಿಲೇವಾರಿ ನಿರ್ಲಕ್ಷ್ಯ ಸಾಗರ್ ಆಸ್ಪತ್ರೆಗೆ 1 ಲಕ್ಷ ದಂಡ

**ಬೆಂಗಳೂರು:** ತ್ಯಾಜ್ಯ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡದ ಸಾಗರ್ ಆಸ್ಪತ್ರೆಗೆ ಬಿಬಿಎಂಪಿ ಮಾರ್ಷಲ್ ಗಸ್ತುಪಡೆ ಮತ್ತು ಆರೋಗ್ಯ ಅಧಿಕಾರಿಗಳು 1 ಲಕ್ಷ ರೂ. ದಂಡ ವಿಧಿಸಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ಉಪನಿಯಮ ಕಾಯ್ದೆ ಜಾರಿ ಹಿನ್ನೆಲೆಯಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿರುವ ಬಿಬಿಎಂಪಿ ಮಿಶ್ರ ಕಸ ನೀಡುವುದು, ಎಲ್ಲೆಂದರಲ್ಲಿ ಕಸ ಎಸೆಯುವ ಮಲ- ಮೂತ್ರ ವಿಸರ್ಜನೆ, ಉಗುಳುವ ಸಾರ್ವಜನಿಕರಿಗೆ ದುಬಾರಿ ದಂಡ ವಿಧಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಮಾರ್ಷಲ್‌ಗಳ ಗಸ್ತು ಪಡೆ ರಚಿಸಿ ಎಲ್ಲೆಡೆ ಕಾರ್ಯನಿಯೋಜನೆ ಮಾಡಲಾಗಿದೆ. ಕುಮಾರಸ್ವಾಮಿ ಲೇಔಟ್‌ನ ಸಾಗರ್ ಆಸ್ಪತ್ರೆಯಲ್ಲಿ ಘನತ್ಯಾಜ್ಯದೊಂದಿಗೆ ಬಯೋ ತ್ಯಾಜ್ಯ ಮಿಶ್ರಣ ಮಾಡಿ ವಿಲೇವಾರಿ ಮಾಡುತ್ತಿದ್ದು, ಗಮನಕ್ಕೆ ಬಂದಿದೆ. ಕೂಡಲೇ ಪಾಲಿಕೆ ಆರೋಗ್ಯಾಧಿಕಾರಿಗಳೊಂದಿಗೆ ಆಸ್ಪತ್ರೆಗೆ ಭೇಟಿ ತಪಾಸಣೆ ನಡೆಸದ ವೇಳೆ ಘನತ್ಯಾಜ್ಯ ಮತ್ತು ಬಯೋತ್ಯಾಜ್ಯ ಮಿಶ್ರಣ ಮಾಡಿರುವುದನ್ನು ಗಮನಿಸಿ ಆಸ್ಪತ್ರೆಯ ಮಾಲೀಕರಿಗೆ 1 ಲಕ್ಷ ರೂ. ದಂಡ ವಿಧಿಸಲಾಗಿದೆ.



ಜನದನಿಯ ಸಾರಥಿ
ವಾರ್ತಾ ಭಾರತಿ

| Date | 09-12-2020 |
|---|---|
| Page No | 3 |


# ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಗೆ ಆದ್ಯತೆ: ಸಚಿವ ಮಾಧುಸ್ವಾಮಿ



ಬೆಂಗಳೂರು, ಡಿ. 8: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯಲ್ಲಿನ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸರಕಾರ ಕ್ರಮ ವಹಿಸಿದ್ದು, ಇನ್ನು ಎರಡು ವರ್ಷಗಳಲ್ಲಿ ತ್ಯಾಜ್ಯ ವೈಜ್ಞಾನಿಕ ಸಂಸ್ಕರಿಸಿ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಪರವಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನಸಭೆಗೆ ಭರವಸೆ ನೀಡಿದ್ದಾರೆ.

ಮಂಗಳವಾರ ವಿಧಾನಸಭೆ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ಎನ್.ಎ.ಹಾರಿಸ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನಗರದಲ್ಲಿ ಪ್ರತಿನಿತ್ಯ 4 ಸಾವಿರ ಮೆಟ್ರಿಕ್ ಟನ್‌ನಷ್ಟು ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿಂದೆ ಮಧುಗಿರಿ ಮತ್ತು ಕನಕಪುರದಲ್ಲಿ ಸಾವಿರ ಎಕರೆ ಪ್ರದೇಶದಲ್ಲಿ ತ್ಯಾಜ್ಯಪುನರ್ ಬಳಕೆ ಪಾರ್ಕ್ ಸ್ಥಾಪನೆ ಮಾಡುವ ಸಂಬಂಧ ಪ್ರಸ್ತಾವನೆ ಇತ್ತು. ಆದರೆ, ಈ ಪ್ರದೇಶದಲ್ಲಿ ಸ್ಥಳೀಯರಿಂದ ಪ್ರತಿರೋಧ ವ್ಯಕ್ತವಾಗಿರುವುದರಿಂದ ಸದ್ಯಕ್ಕೆ ಪ್ರಸ್ತಾವವನ್ನು ತಡೆಹಿಡಿಯಲಾಗಿದೆ ಎಂದು ಹೇಳಿದರು.

ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಐದು ಕಂಪೆನಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಪೈಕಿ ಎರಡು ಸಂಸ್ಥೆಗಳಿಂದ ಘಟಕಗಳ ಸಿದ್ಧತಾ ಕಾರ್ಯ ನಡೆಯುತ್ತಿದ್ದು, ಮುಂದಿನ ಎರಡು ವರ್ಷದಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಲಿವೆ ಎಂದು ಸಚಿವ ಮಾಧುಸ್ವಾಮಿ ವಿವರಿಸಿದರು.

ಕೆಪಿಸಿಎಲ್ ವತಿಯಿಂದ ಬಿಡದಿಯಲ್ಲಿ 600 ಮೆಟ್ರಿಕ್ ಟನ್ ಸಾಮರ್ಥ್ಯದ ಘನತ್ಯಾಜ್ಯ ಉಪಯೋಗಿಸಿ 11.50 ಮೆ.ವ್ಯಾ.ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಯೋಜನೆಯು 260 ಕೋಟಿ ರೂ.ಗೆ ಅನುಮೋದನೆಗೊಂಡು ಕಾರ್ಯಾದೇಶ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸತಾರೆಂ ಎಂಟರ್‌ಪ್ರೈಸಸ್ ಪ್ರೈ.ಲಿ. ವತಿಯಿಂದ ಪ್ರತಿದಿನ 1 ಸಾವಿರ ಮೆಟ್ರಿಕ್ ಟನ್ ಮಿಶ್ರ ಘನತ್ಯಾಜ್ಯವನ್ನು ಉಪಯೋಗಿಸಿ, 12 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಘಟಕವನ್ನು ಕನ್ನಲ್ಲಿ ಘಟಕದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

ಪಿಪಿಪಿ ಮಾದರಿಯಲ್ಲಿ ಮಾವಳ್ಳಿಪುರ ಘಟಕದಲ್ಲಿ ಫರ್ಮ್‌ಗ್ರೀನ್ ಸಂಸ್ಥೆಯಿಂದ ಪ್ರತಿದಿನ ಒಂದು ಸಾವಿರ ಮೆಟ್ರಿಕ್ ಟನ್ ಘನತ್ಯಾಜ್ಯ ಉಪಯೋಗಿಸಿ ಸಂಕುಚಿತ ನೈಸರ್ಗಿಕ ಅನಿಲ ಉತ್ಪಾದನೆ ಮಾಡಲು ಸರಕಾರವು ಅನುಮೋದನೆ ನೀಡಿದೆ. ಅಂತೆಯೇ ಇನ್ನಿತರ ಎರಡು ಯೋಜನೆಗಳಾದ ಮಾರೇನಹಳ್ಳಿ ಸ್ಥಳದಲ್ಲಿ 600 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡಲು ನೆಕ್ಸಸ್ ನೋವಸ್ ಸಂಸ್ಥೆಯವರಿಗೆ ಒಪ್ಪಂದ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

| Date | 08-12-2020 |
| --- | --- |
| Page No | 6 |



# ತ್ಯಾಜ್ಯ ವಿದ್ಯುತ್ ಘಟಕ ಎರಡು ವರ್ಷದಲ್ಲಿ ಕಾರ್ಯಾರಂಭ



ಬೆಂಗಳೂರು, ಡಿ.8 - ಬಿಬಿಎಂಪಿ ವತಿಯಿಂದ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ, ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕಗಳು ಎರಡು ವರ್ಷದೊಳಗೆ ಕಾರ್ಯಾರಂಭ ಮಾಡಲಿವೆ ಎಂದು ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನಸಭೆಗೆ ಇಂದು ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಸದಸ್ಯ ಎನ್.ಎ.ಹ್ಯಾರೀಸ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರಿನಲ್ಲಿ ಗೃಹಬಳಕೆಯಿಂದ ದಿನವೊಂದಕ್ಕೆ 4ರಿಂದ 4.5ಸಾವಿರ ಹಾಗೂ ವಾಣಿಜ್ಯ ಬಳಕೆಯಿಂದ 5 ಸಾವಿರ ಮೆಟ್ರಿಕ್ ಟನ್‌ಗೂ ಅಧಿಕ ಕಸ ಸಂಗ್ರಹಣೆಯಾಗುತ್ತದೆ. ಇದನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ ವಿದ್ಯುತ್ ಉತ್ಪಾದನೆ ಮಾಡಲು 6 ಕಂಪನಿಗಳಿಂದ ಟೆಂಡರ್ ಕರೆಯಲಾಗಿದೆ ಎಂದರು.

ವಿದ್ಯುತ್ ಉತ್ಪಾದನಾ ಘಟಕಗಳು ಕಾರ್ಯಾರಂಭ ಮಾಡಲು ಹೆಚ್ಚಿನ ಸಮಯ ಬೇಕಾಗುತ್ತದೆ. ಸದ್ಯಕ್ಕೆ ಎರಡು ಘಟಕಗಳು ಕಾರ್ಯಾರಂಭ ಮಾಡಬಹುದು. ಎರಡು ವರ್ಷದ ಅವಧಿಯೊಳಗೆ ಎಲ್ಲ ಘಟಕಗಳು ಕೆಲಸ ಮಾಡಲಿವೆ ಎಂದು ತಿಳಿಸಿದರು.

ಕೆಪಿಟಿಸಿಎಲ್ ವತಿಯಿಂದ ಬಿಡದಿ ಬಳಿ ಪ್ರತಿದಿನ 600 ಮೆಟ್ರಿಕ್ ಟನ್ ಸಾಮರ್ಥ್ಯದ ಘನತ್ಯಾಜ್ಯವನ್ನು ಸಂಸ್ಕರಿಸಿ 11.50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಘಟಕ ಸ್ಥಾಪಿಸುವ 360 ಕೋಟಿಗೆ ಅನುಮೋದನೆ ನೀಡಲಾಗಿದೆ.

ಸಾರ್ವಜನಿಕ, ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಸತಾರೆಮ್ ಎಂಟರ್‌ಪ್ರೈಸ್ ಪ್ರೈವೆಟ್ ಸಂಸ್ಥೆಯು ಪ್ರತಿದಿನ ಒಂದು ಸಾವಿರ ಮೆಟ್ರಿಕ್ ಟನ್ ತ್ಯಾಜ್ಯ ಉಪಯೋಗಿಸಿ ಕನ್ನಲ್ಲಿ ಬಳಿ 12 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ ತೆರೆಯಲಿದೆ.

ಪಿಪಿಪಿ ಮಾದರಿಯಲ್ಲಿ ಬಿಬಿಎಂಪಿಯಿಂದ ಮೇ ಇಂಡಿಯಮ್ ಸಂಸ್ಥೆಯಿಂದ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಉಪಯೋಗಿಸಿ ದೊಡ್ಡಬಿದರಕಲ್ಲು ಬಳಿ 4 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ 12 ತಿಂಗಳಲ್ಲಿ ಪೂರ್ಣಗೊಳಿಸಲಿದೆ ಎಂದರು.

ಪಿಪಿಪಿ ಮಾದರಿಯಲ್ಲಿ ಮಾವಳ್ಳಿಪುರ 1 ಸಾವಿರ ಮೆಟ್ರಿಕ್ ಟನ್‌ನಷ್ಟು ಘನತ್ಯಾಜ್ಯ ಸಂಸ್ಕರಿಸಿ ಘರ್ಮ್‌ಗ್ರೀನ್ ಎಂಬ ಸಂಸ್ಥೆಯು ಕಾಂಪ್ರೋಸ್ಟ್ ನ್ಯಾಚುರಲ್ ಗ್ಯಾಸ್ ಉತ್ಪಾದಿಸಲು ಮುಂದೆ ಬಂದಿದೆ ಎಂದರು.

ಮಾರನೇಹಳ್ಳಿ ಬಳಿ 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಮೆಕ್ಸಸ್ ನೋವಸ್ ಸಂಸ್ಥೆಯು, ಮಾವಳ್ಳಿಪುರ ಘಟಕದಲ್ಲಿ 500 ಮೆಟ್ರಿಕ್ ಟನ್ ತ್ಯಾಜ್ಯ ಉಪಯೋಗಿಸಿ 8 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಎನ್‌ಇಜಿ ಸಂಸ್ಥೆ ಮುಂದೆ ಬಂದಿದೆ ಎಂದು ಹೇಳಿದರು.

ಮುಂಬರುವ ಎರಡು ವರ್ಷಗಳಲ್ಲಿ ಪ್ರತಿದಿನ ಸುಮಾರು 4000 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ ವಿದ್ಯುತ್/ಸಿಎನ್‌ಜಿ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳದೆ ಎಂದು ತಿಳಿಸಿದರು.

ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ 7 ಸಂಸ್ಕರಣಾ ಘಟಕಗಳಿದ್ದು, ಪ್ರತಿದಿನ 1121 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ. ದೊಡ್ಡಬಿದರಕಲ್ಲು, ಕನ್ನಲ್ಲಿ, ಚಿಕ್ಕನಾಗಮಂಗಲ, ಕೆಸಿಡಿಸಿ, ಲಿಂಗದೀರನಹಳ್ಳಿ, ಸುಬ್ಬರಾಯನಪಾಳ್ಯ ಮತ್ತು ಎಂಎಸ್‌ಜಿಟಿಗೆ ವಹಿಸಲಾಗಿದೆ ಎಂದರು.